ಸಂಪುಟ 01 | ಸಂಚಿಕೆ 46 | ಶನಿವಾರ 27 ಡಿಸೆಂಬರ್ 2025 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೇಸೆ
NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1. ಅಂತರರಾಷ್ಟ್ರಿಯ ರೋಗ ಹರಡುವಿಕೆಗೆ ಸಿದ್ಧತೆ ದಿನ? International Day of Epidemic Preparedness ಈ ದಿನದ ಉದ್ದೇಶ ಜನ–ರಿಗೆ ರೋಗಗಳ ಹರಡುವಿಕೆ (ಎಪಿಡೆಮಿಕ್/ಪ್ಯಾಂಡಮಿಕ್) ಬಗ್ಗೆ ಜಾಗೃತಿ ಮೂಡಿಸುವುದು,ವೈಜ್ಞಾನಿಕ ಜ್ಞಾನ, ಮಾಹಿತಿ ವಿನಿಮಯ ಮತ್ತು ಉತ್ತಮ ತಯಾರಿ ಕ್ರಮಗಳನ್ನು ಉತ್ತೇಜಿಸುವುದು. ಕೊರೋನಾಂತಹ ಪ್ಯಾಂಡಮಿಕ್‌ಗಳಿಂದ ಮಾನವ ಆರೋಗ್ಯ ಹಾಗೂ ಸಮಾಜಕ್ಕೆ ಎಷ್ಟು ಪರಿಣಾಮ ಬರುವುದೆಂದು ನೋಟ್ಟಿ ಮಾನವ ಸಮಾಜದ ಆರೋಗ್ಯ ತಂತ್ರಗಳ ತನ್ಮಾಡಲು ಈ ದಿನವನ್ನು ಆಚರಿಸುತ್ತಾರೆ.

2. ಸಂವಿಧಾನ ದಿನ–ಉತ್ತರ ಕೊರಿಯಾ (Constitution Day) ಉತ್ತರ ಕೊರಿಯಾದಲ್ಲಿ 27 ಡಿಸೆಂಬರ್ ಅನ್ನು ಸಂವಿಧಾನದ ಅಂಗೀಕಾರದ ದಿನವಾಗಿ ಪಡಿಸಿದ್ದರೆಂದು ಈ ದಿನ ಪುರಸ್ಕಾರವಾಗಿ ಆಚರಿಸುತ್ತಾರೆ. ಇದು ದೇಶದ ಜ್ಞಾನ, ಸಾಂವಿಧಾನಿಕ ಮಾನ್ಯತೆ ಮತ್ತು ಸರ್ಕಾರದ ಮೂಲಭೂತ ನಿಯಮಗಳ ಪ್ರಾಮುಖ್ಯತೆಯನ್ನು ಮೀರಿ ಹುಟ್ಟುಹಾಕುತ್ತದೆ

## ಸುಭಾಷಿತ

ನಾನು ಶ್ರೇಷ್ಠ ಎನ್ನುವುದು
ಆತ್ಮವಿಶ್ವಾಸ, ನಾನೇ ಶ್ರೇಷ್ಠ
ಎನ್ನುವುದು ಅಹಂಕಾರ.

ಗೌತಮ ಬುದ್ಧ

ನೈಜ್ಯ ದೇಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

### ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಮುಂದುವರಿಸುವಂತೆ ಹೈಕಮಾಂಡ್ ಗೆ ಒತ್ತಾಯ :

# ಮೈಸೂರಿನಲ್ಲಿ ಅಹಿಂದ ಸಮಾವೇಶಕ್ಕೆ ಡೇಟ್ ಫಿಕ್ಸ್

**ಬೆಂಗಳೂರು: ರಾಜ್ಯದಲ್ಲಿ ಸಿಎಂ ಕುರ್ಚಿ ಫೈಟ್ ಮಧ್ಯೆ ಅಹಿಂದ ಸಮಾವೇಶಕ್ಕೆ ಮುಹೂರ್ತ ಫಿಕ್ಸ್ ಆಗಿದ್ದು, ಜನವರಿ 25 ರಂದು ಮೈಸೂರಿನಲ್ಲಿ ಅಹಿಂದ ಸಮಾವೇಶ ನಡೆಸಲು ನಿರ್ಧರಿಸಲಾಗಿದೆ ಎಂದು ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆ ಘೋಷಣೆ ಮಾಡಿದೆ. ಸಿಎಂ ಸಿದ್ದರಾಮಯ್ಯ ಬೆನ್ನಿಗೆ ಅಹಿಂದ ಸಮುದಾಯಗಳು ನಿಂತಿದ್ದು, ಸಿದ್ದರಾಮಯ್ಯರನ್ನು ಬದಲಾಯಿಸದಂತೆ ಒತ್ತಡ ಹೇರಲು ಸಮಾವೇಶ ನಡೆಸಲು ಉದ್ದೇಶಿಸಲಾಗಿದೆ.**

ಅಹಿಂದ ಸಮಾವೇಶಕ್ಕೆ ಮಹೂರ್ತಕ್ಕೆ ದಿನಾಂಕ ಫಿಕ್ಸ್ ಆಗಿದ್ದು ಈ ಮೂಲಕ ಸಿಎಂ ಸಿದ್ದರಾಮಯ್ಯ ಅವರ ಬೆಂಬಲಕ್ಕೆ ನಿಂತುಕೊಳ್ಳುವುದಕ್ಕೆ ಅಹಿಂದ ನಾಯಕರು ಮುಂದಾಗಿದ್ದಾರೆ. ಕುರ್ಚಿ ಕದನದ ನಡುವೆ ಸಿದ್ದರಾಮಯ್ಯ ಬೆಂಬಲಿಗರು ಹೊಸ ಅಸ್ತ್ರ ಪ್ರಯೋಗ ಮಾಡಲಿದ್ದು, ಜನವರಿ 25 ಕ್ಕೆ ಅಹಿಂದ ಸಮಾವೇಶ ನಡೆಯಲಿದೆ ಎನ್ನಲಾಗಿದೆ. ದಸರಾ ವಸ್ತು ಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿ ಅಹಿಂದ ಸಮಾವೇಶ ನಡೆಸಲು ನಿರ್ಧರಿಸಲಾಗಿದೆ ಎಂದು ಅಹಿಂದ ಮೈಸೂರು ಮತ್ತು ಕರ್ನಾಟಕ




ರಾಜ್ಯ ಹಿಂದುಳಿದ ಸಮುದಾಯಗಳ ಜಾಗೃತಿ ವೇದಿಕೆ ಅಧ್ಯಕ್ಷ ಕೆ. ಶಿವರಾಮ್ ತಿಳಿಸಿದ್ದಾರೆ. ಸ್ವಾರ್ಥ ಹಿತಾಸಕ್ತಿಗಳು ಮತ್ತು ಪ್ರಬಲ ಸಮುದಾಯಗಳು ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಲು ಪ್ರಯತ್ನಿಸುತ್ತಿವೆ. ಅವರು ರಾಜ್ಯದಲ್ಲಿ ಕೋಮುವಾದ ಮತ್ತು ಆರ್‌ಎಸ್‌ಎಸ್ ಚಟುವಟಿ–ಕೆಗಳ ವಿರುದ್ಧ ಗೋಡೆಯಂತೆ ನಿಂತಿದ್ದಾರೆ. ಅಹಿಂದ ಸಮುದಾಯಗಳಿಗೆ ಪ್ರಯೋಜನಕಾ–ರಿಯಾದ ಜಾತಿ ಜನಗಣತಿಯ ಅನುಷ್ಠಾನವನ್ನು ಪ್ರಬಲ ಸಮುದಾಯಗಳು ವಿರೋಧಿಸುತ್ತಿವೆ. ದೇಶಾದ್ಯಂತ ಶೇ. 65–70 ರಷ್ಟು ಅಹಿಂದ ಸಮುದಾಯಗಳು ಕಾಂಗ್ರೆಸ್ ಮತಬ್ಯಾಂಕ್ ಅನ್ನು ರೂಪಿಸುತ್ತವೆ ಎಂಬುದನ್ನು ಕಾಂಗ್ರೆಸ್ ಹೈಕಮಾಂಡ್ ಅರಿತುಕೊಳ್ಳಬೇಕು. ಸಿದ್ದರಾಮಯ್ಯ ಅವರನ್ನು ಪದಚ್ಯುತಗೊಳಿಸಿದರೆ ಪಕ್ಷವು ಅಹಿಂದ ಬೆಂಬಲವನ್ನು ಕಳೆದುಕೊಳ್ಳುತ್ತದೆ" ಎಂದು ಅವರು ಹೇಳಿದರು.

ಕರ್ನಾಟಕದಲ್ಲಿ ಇಲ್ಲಿಯವರೆಗೆ 23 ಮುಖ್ಯಮಂತ್ರಿಗಳಾಗಿದ್ದಾರೆ, ಆದರೆ ಬೆರಳೆಣಿಕೆಯಷ್ಟು ಮಾತ್ರ ಅಹಿಂದ ಸಮುದಾಯಗಳಿಂದ ಬಂದಿದ್ದಾರೆ ಎಂದು ಶಿವರಾಮ್ ಗಮನಸೆಳೆದರು. ಶತಮಾನಗಳಿಂದ ಅಹಿಂದ ಸಮುದಾಯಗಳು ಅನ್ಯಾಯವನ್ನು ಎದುರಿಸುತ್ತಿವೆ. ನಾವು ನಮ್ಮ ಹಕ್ಕುಗಳಿಗಾಗಿ ಹೋರಾಡಬೇಕು ಮತ್ತು ಈ ಸಮ್ಮೇಳನದ ಮೂಲಕ ಕಾಂಗ್ರೆಸ್ ಹೈಕಮಾಂಡ್‌ಗೆ ನಮ್ಮ ಸಂದೇಶವನ್ನು ತಿಳಿಸಬೇಕು. ನಾಯಕತ್ವ ಅಥವಾ ಸೀಟು ಹಂಚಿಕೆ ಜಗಳದಿಂದಾಗಿ ಕರ್ನಾಟಕ ಮತ್ತೊಂದು ರಾಜಸ್ಥಾನವಾಗಬಾರದು.

# ಕಣ್ಣು ದೇಹದ ಅತ್ಯಮೂಲ್ಯ ಅಂಗ: ಡಾ.ಪ್ರಭುಗೌಡ




❑ ನೈಜ್ಯ ದೇಸೆ ನ್ಯೂಸ್

**ತಾಳಿಕೋಟಿ: ಮನುಷ್ಯನ ಶರೀರದಲ್ಲಿ ಕಣ್ಣು ಎಂಬುದು ಅತ್ಯಮೂಲ್ಯ ಅಂಗವಾಗಿದೆ ಅದರ ಕುರಿತು ಯಾವ ಕಾರಣಕ್ಕೂ ನಿಸ್ಕಾಳಜಿ ತೋರಬಾರದು ಎಂದು ವಿಜಯಪುರ ಅನುಗ್ರಹ ಕಣ್ಣಿನ ಆಸ್ಪತ್ರೆ ಮುಖ್ಯಸ್ಥ ಡಾ.ಪ್ರಭುಗೌಡ ಲಿಂಗದಳ್ಳಿ ಸಲಹೆ ನೀಡಿದರು.**

ಶುಕ್ರವಾರ ತಾಲೂಕಿನ ಮೂಕಿಹಾಳ ಗ್ರಾಮದಲ್ಲಿ ಹಜರತ್ ಲಾಡಲೇ ಮಶಾಕ್ ದರ್ಗಾದ ಉರುಸಿನ ಅಂಗವಾಗಿ ಅನುಗ್ರಹ ಕಣ್ಣಿನ ಆಸ್ಪತ್ರೆ ಹಾಗೂ ಜಿಲ್ಲಾ ಅಂದತ್ವ ನಿವಾರಣೆ ಸಂಸ್ಥೆ ವಿಜಯಪುರ ಹಾಗೂ ಜಾತ್ರಾ ಉತ್ಸವ ಕಮಿಟಿ ಮೂಕಿಹಾಳ ಸಹಯೋಗದಲ್ಲಿ ಏರ್ಪಡಿಸಿದ್ದ ಉಚಿತ ನೇತ್ರ ತಪಾಸಣೆ, ಶಸ್ತ್ರ ಚಿಕಿತ್ಸೆ ಹಾಗೂ ಸ್ವಯಂ ಪ್ರೇರಿತ ರಕ್ತದಾನ ಶಿಬಿರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಅನುಗ್ರಹ ಕಣ್ಣಿನ ಆಸ್ಪತ್ರೆ ಗ್ರಾಮೀಣ ಭಾಗದ ಜನರಿಗೆ ಅದರಲ್ಲೂ ವಿಶೇಷವಾಗಿ ಬಡ ಜನರಿಗೆ ಅನುಕೂಲವಾಗಲೆಂದು ಇಂತಹ ಉಚಿತ ಶಿಬಿರಗಳನ್ನು ಹಮ್ಮಿಕೊಳ್ಳುತ್ತದೆ, ಈ ಶಿಬಿರದಲ್ಲಿ ಶಸ್ತ್ರ ಚಿಕಿತ್ಸೆಗೆ ಆಯ್ಕೆಯಾದವರನ್ನು ಇಲ್ಲಿಂದ ನಮ್ಮ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಸಂಪೂರ್ಣ ಉಚಿತವಾಗಿ ಚಿಕಿತ್ಸೆ ಮಾಡಿಸಿ ಮತ್ತೆ ಊರಿಗೆ ಮರಳಿ ಬಿಡಲಾಗುವುದು.

ಆದ್ದರಿಂದ ಈ ಶಿಬಿರದ ಸದುಪಯೋಗವನ್ನು ತಾವೆಲ್ಲರೂ ಮಾಡಿಕೊಳ್ಳಬೇಕು ಎಂದರು. ಉಚಿತ ಆರೋಗ್ಯ ತಪಾಸಣೆ ಶಿಬಿರದಲ್ಲಿ ಒಟ್ಟು 200 ಜನರು ನೇತ್ರ ತಪಾಸಣೆ ಮಾಡಿಕೊಂಡರಲ್ಲದೆ ಅದರಲ್ಲಿ 75 ಜನರನ್ನು ಶಸ್ತ್ರ ಚಿಕಿತ್ಸೆಗೆ ಆಯ್ಕೆ ಮಾಡಲಾಯಿತು. ಅದರಂತೆ 38 ಜನರು ಸ್ವಯಂ ಪ್ರೇರಿತರಾಗಿ ರಕ್ತದಾನವನ್ನು ಮಾಡಿದರು. ಕಾರ್ಯಕ್ರಮದಲ್ಲಿ ಉರುಸು ಉತ್ಸವ ಸಮಿತಿಯ ಅಧ್ಯಕ್ಷ ಕಾಸೀಮ ಪಟೇಲ ಪಾಟೀಲ, ಆಡಳಿತ ವೈದ್ಯಾಧಿಕಾರಿ ಡಾ.ಶ್ರೀಶೈಲ ಹುಕ್ಕೇರಿ, ಅನುಗ್ರಹ ಕಣ್ಣಿನ ಆಸ್ಪತ್ರೆ ಹಾಗೂ ಕೊಣ್ಣೂರ ಪಿ ಎಚ್ ಸಿ ಸಿಬ್ಬಂದಿಗಳು, ಮತ್ತು ಶಿಬಿರಾರ್ಥಿಗಳು ಇದ್ದರು.

## ಶ್ರೀ ಅಟಲ್ ಬಿಹಾರಿ ವಾಜಪೇಯಿ ಅವರ 101ನೇ ವರ್ಷದ ಜನ್ಮದಿನಾಚರಣೆ

❑ ನೈಜ್ಯ ದೇಸೆ ನ್ಯೂಸ್






**ಸಿಂಧನೂರು: ಡಿ 26 ನಗರದ ಎಕೆ ಗೋಪಾಲ್ ನಗರದಲ್ಲಿ ನಗರ ಮಂಡಲ ವತಿಯಿಂದ ದೇಶ ಕಂಡ ಶ್ರೇಷ್ಠ ಮಾಜಿ ಪ್ರಧಾನಿ ಖ್ಯಾತ ವಾಗ್ಮಿ ಶ್ರೀ ಅಟಲ್ ಬಿಹಾರಿ ವಾಜಪೇಯಿ ಅವರ 101ನೇ ವರ್ಷದ ಜನ್ಮದಿನಾಚರಣೆ ಅಂಗವಾಗಿ ಎಕೆ ಗೋಪಾಲ್ ನಗರ ಶಾಲೆಯಲ್ಲಿ ಸಸಿ ನೀಡುವ ಕಾರ್ಯಕ್ರಮದಲ್ಲಿ ನಮ್ಮ ಯುವ ನಾಯಕರಾದ ಶ್ರೀ ಕೆ. ರಾಜಶೇಖರ ರವರು ಹಾಗೂ ನಗರ ಮಂಡಲದ ಅಧ್ಯಕ್ಷರಾದ ಶ್ರೀಸಿದ್ದರಾಮೇಶ ಮನ್ನಾಪುರು ರವರು ಭಾಗವಹಿಸಿ ಸಸಿ ನೆಡುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.**

ಈ ಸಂದರ್ಭದಲ್ಲಿ ಎಸ್ ಡಿ ಎಂ ಸಿ ಅಧ್ಯಕ್ಷರಾದ ಮುರುಗೇಶ್ ಹಿರೇಮಠ, ಶಾಲಾ ಮುಖ್ಯ ಶಿಕ್ಷಕರಾದ ವಿಜಯಲಕ್ಷ್ಮಿ, ಮಹಿಳಾ ಮಂಡಲದ ಅಧ್ಯಕ್ಷರಾದ ಶಿವಮ್ಮ, ಮುಖಂಡರಾದ ಮಹಾದೇವ ನಾಯಕ, ಸಿದ್ದಲಿಂಗಯ್ಯ ಸ್ವಾಮಿ ವಕೀಲರು,ಸಂಗಪ್ಪ,ಪಕೀರಪ್ಪ ಬಾಗೋಡಿ, ಜಗದೀಶ್, ರಮೇಶ್, ಮೌನೇಶ್ ಹೊಸಮನಿ, ಮುತ್ತು ಬರ್ಸಿ, ಮಲ್ಲಿಕಾರ್ಜುನ ಕಾಟಿಗಲ್, ನಾಗರಾಜ್ ದೇವರಗುಡಿ,ಯಮನಮ್ಮ ಹಾಗೂ ಶಾಲಾ ಆಡಳಿತ ಮಂಡಳಿ ಇನ್ನಿತರರು ಉಪಸ್ಥಿತರಿದ್ದರು.

## ಕಂಪ್ಯೂಟರ್ ನಿರ್ವಾಹಕರ ದಿನಾಚರಣೆ

❑ ನೈಜ್ಯ ದೇಸೆ ನ್ಯೂಸ್

**ತಾಳಿಕೋಟಿ: ಪಟ್ಟಣದ ತಾಲೂಕು ಪಂಚಾಯತ್ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಗ್ರಾಮ ಪಂಚಾಯತ್ ಕ್ಲರ್ಕ್ ಡೇಟಾ ಎಂಟ್ರಿ ಆಪರೇಟರ್ ಗಳ ಕ್ಷಮಾಭಿವೃದ್ಧಿ ಸಂಘದಿಂದ ಕಂಪ್ಯೂಟರ್ ಪಿತಾಮಹ ಚಾರ್ಲೆಸ್ ಬ್ಯಾಬೇಜ್ ಸ್ಮರಣಾರ್ಥ ಕಂಪ್ಯೂಟರ್ ಆಪರೇಟರ್ ಗಳ ದಿನಾಚರಣೆಯನ್ನು ಶುಕ್ರವಾರ ಆಚರಿಸಲಾಯಿತು.**

ಈ ಸಂದರ್ಭದಲ್ಲಿ ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಅನಸೂಯಾ ಚಲವಾದಿ ಅವರು ಮಾತನಾಡಿ ಸಾರ್ವಜನಿಕರಿಗೆ ನಿಗಧಿತ ಅವಧಿಯಲ್ಲಿ ಸೇವೆ ಸಲ್ಲಿಸಲು ಕಂಪ್ಯೂಟ–ರ್ ಡೇಟಾ ಎಂಟ್ರಿ ಸಹಾಯಕರ ಸೇವೆ ಅಪಾರವಾಗಿದೆ. ತಾಲೂಕಿನ ಎಲ್ಲಾ ಗಣ–ಕಯಂತ್ರ ನಿರ್ವಾಹಕರು ಪ್ರಮಾಣಿಕವಾಗಿ ಕೆಲಸ ಮಾಡಿ ಮತ್ತು ಕಂಪ್ಯೂಟರ್ ಆಪರೇಟರ್ ಆಗಿ



ಕೆಲಸ ಮಾಡಬೇಕಾದರೆ ಹೆಚ್ಚಿನ ಜ್ಞಾನ ಮತ್ತು ಸಾಮರ್ಥ್ಯ ಹೊಂದಿರಬೇಕು. ಆಗಾಗ ಆಗುವ ಬದಲಾವಣೆಗೆ ತಕ್ಕಂತೆ ಹೆಚ್ಚಿನ ಕೌಶಲ್ಯದ ಜ್ಞಾನ ಬೆಳೆಸಿಕೊಳ್ಳಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಪಿಡಿಓ ಪ್ರಕಾಶ ಅಂಜುಟಗಿ, ಆಯ್.ಡಿ.ಬಡಿಗೇರ, ಐಇಸಿ ಸಂಯೋಜ–ಕ ಮಲಕಪ್ಪ, ಮಹಾಂತಗೌಡ ದೊರೆಗೋಳ, ಜಗದೀಶ್ ಲಮಾಣಿ, ಮಡಿವಾಳಪ್ಪ ತಳವಾರ, ಡಾಟಾ ಎಂಟ್ರಿ ಆಪರೇಟರ್ ಗಳಾದ ಗುರುನಾಥ ಬಿರಾದಾರ, ಆನಂದ ಮದರ್ಕಲ್, ಅಶೋಕ ನಾಟಿಕರ, ವೀರೇಶ ಹೊಸಮನಿ, ಡಿ.ಎಸ್.ಹಿರೇಮಠ, ಬಸವರಾಜ ಮಸರಕಲ್, ಮಲ್ಲು ಇಂಗಳೇಶ್ವರ, ಸಂತೋಷ ನಾಯ್ಕೋಡಿ, ಸಿದ್ದರಾಜ ಬಡಿಗೇರ ಮತ್ತಿತರರು ಇದ್ದರು.

# ರಾಯಚೂರು ಜಿಲ್ಲೆಯಲ್ಲಿ ಪಲ್ಸ್ ಪೋಲಿಯೋ ಶೇ.100.01 ರಷ್ಟು ಸಾಧನೆ

❑ ನೈಜ್ಯ ದೇಸೆ ನ್ಯೂಸ್

**ರಾಯಚೂರು: ಡಿಸೆಂಬರ್ 26 (ಕರ್ನಾಟಕ ವಾರ್ತೆ): ರಾಷ್ಟೀಯ ಪಲ್ಸ್ ಪೋಲಿಯೋ ಅಭಿಯಾನದಡಿಯಲ್ಲಿ, ಹುಟ್ಟಿನಿಂದ 5 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಎರಡು ಹನಿ ಪೋಲಿಯೋ ಲಸಿಕೆ ಹಾಕುವ ಆಭಿಯಾನ ಡಿಸೆಂಬರ್ 21ರಿಂದ ಆರಂಭವಾಗಿದ್ದು, ಜಿಲ್ಲೆಯ ರಾಯಚೂರು, ಲಿಂಗಸುಗೂರು, ಸಿಂಧನೂರು, ಮಾನವಿ, ದೇವದುರ್ಗ ತಾಲ್ಲೂಕಗಳಲ್ಲಿ ಮೊದಲ ದಿನ ಡಿ.21ರಂದು ಒಟ್ಟು 2,59,984 ಮಕ್ಕಳ ಪೈಕಿ 2,47,052 ಮಕ್ಕಳಿಗೆ ಲಸಿಕೆ ಹಾಕುವ ಮೂಲಕ ಶೇ.95.02 ರಷ್ಟು ಸಾಧನೆ ಮಾಡಲಾಗಿದೆ.**

ಡಿಸೆಂಬರ್ 24 ರವರೆಗೆ ಉಳಿದ 12,932 ಮಕ್ಕಳಿಗು ಲಸಿಕೆ ಹಾಕಿ ಒಟ್ಟು 2,60,002 ಮಕ್ಕಳನ್ನು ತಲುಪಿ ಶೇ.100.02ರಷ್ಟು ಸಾಧನೆ ಮಾಡಲಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಸುರೇಂದ್ರ ಬಾಬು ಅವರು ತಿಳಿಸಿದ್ದಾರೆ. ಡಿಸೆಂಬರ್ 21 ರಂದು, ಎನ್ ಎಸ್ ಬೋಸರಾಜು, ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ




ಸಚಿವರು ಕರ್ನಾಟಕ ಸರಕಾರ ಹಾಗೂ ಜಿ. ಕುಮಾರ್ ನಾಯಕ ಸಂಸದರು ರಾಯಚೂರು ಲೋಕಸಭಾ ಕ್ಷೇತ್ರ ಅವರು ಅಭಿಯಾನಕ್ಕೆ ಚಾಲನೆ ನೀಡಿದ್ದರು. ಗುರಿ ಸಾಧನೆಗಾಗಿ ಜಿಲ್ಲೆಯ ಎಲ್ಲಾ ಮಕ್ಕಳಿಗೂ ಲಸಿಕೆ ಹಾಕುವ ದಿಶೆಯಲ್ಲಿ 601 ಕ್ಲಿಷ್ಟಕರವಾದ ವಸತಿ ಪ್ರದೇಶಗಳನ್ನು, 203 ವಲಸೆ ಜನವಸತಿ ಪ್ರದೇಶಗಳನ್ನು ಗುರುತಿಸಲಾಗಿತ್ತು.

ಜಿಲ್ಲೆಯಾದ್ಯಂತ 1132 ಲಸಿಕಾ




ಬೂತ್‌ಗಳು 1,133 ಮನೆ ಭೇಟಿ ನೀಡುವ ತಂಡಗಳು, ಹೆಚ್ಚು ಜನಸೇರುವ ಹಾಗೂ ಸಂತೆ–ಮಾರುಕಟ್ಟೆ, ಬಸ್ ನಿಲ್ದಾಣ ಮತ್ತು ಇತರೆ ಜನ ಹೆಚ್ಚು ಸೇರುವ ಸ್ಥಳಗಳಲ್ಲಿ ಲಸಿಕೆ ಹಾಕಲು 53 ತಂಡಗಳು ಮತ್ತು ವಲಸೆ ಪ್ರದೇಶಗಳಾದ ಇಟ್ಟಿಗೆ ಭಟ್ಟಿ, ಕಟ್ಟಡ ಕಾಮಗಾರಿ ಪ್ರದೇಶ, ಕಬ್ಬು ಕಡಿಯುವ ಸ್ಥಳ, ಕು–ರಿಹಟ್ಟಿ ಮುಂತಾದ ಸ್ಥಳಗಳಲ್ಲಿ ಲಸಿಕೆ ಹಾಕಲು 33 ಸಂಚಾರಿ ತಂಡಗಳ ಮೂಲಕ ಸಾಧನೆ ಮಾಡಲಾಗಿದೆ. ಈ ಸಾಧನೆಯನ್ನು ಸಾಧಿಸಲು ಆರೋಗ್ಯ ಇಲಾಖೆಯ ಸಿಬ್ಬಂದಿಯೊಂದಿಗೆ ರಿಮ್ಸ್ ಆಸ್ಪತ್ರೆ, ನವೋದಯ ವೈದ್ಯಕೀಯ ಕಾಲೇಜು, ನಂದಿನಿ, ಎಸ್‌ಕೆಇ ಪ್ಯಾರಾ ಮೆಡಿಕಲ್ ಕಾಲೇಜ್, ರೋಟರಿ, ಲಯನ್ಸ್, ರೆಡ್‌ಕ್ರಾಸ್ ಹಾಗೂ ಇತರೆ ಸಂಘ ಸಂಸ್ಥೆಯವರು ಸ್ವಯಂ ಸೇವಕರಾಗಿ, ಪೋಲಿಯೋ ವ್ಯಾಕ್ಸಿನೇಟರ್ ಆಗಿ ಕಾರ್ಯನಿರ್ವಹಿಸಿದ್ದಾರೆ.

ಅಲ್ಲದೇ 248 ಮೇಲ್ವಿಚಾರಕರು ಹಾಗೂ ಡಾ ನಂದೀತಾ ಎಮ್ ಎನ್ ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಸೇರಿದಂತೆ ಜಿಲ್ಲೆಯ ಕಾರ್ಯಕ್ರಮ ಅನುಷ್ಠಾನ ಅಧಿಕಾರಿಗಳಾದ ಡಾ.ಗಣೇಶ್, ಡಾ.ಶಿವಕುಮಾರ್, ಡಾ.ಶಾಕೀರ್, ಚಂದ್ರಶೇಖರ್ ನೋಡಲ್ ಅಧಿಕಾರಿಗಳಾಗಿ ಕಾರ್ಯ ನಿರ್ವಹಿಸಿದ್ದು, ಜಿಲ್ಲೆಯಲ್ಲಿ ಸಚಿವರು, ಶಾಸಕರು, ಜನಪ್ರತಿನಿಧಿಗಳು ಹಾಗೂ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು ಇವರ ಮಾರ್ಗದರ್ಶನದಲ್ಲಿ ಜಿಲ್ಲಾಡಳಿತ ಜಿಲ್ಲಾ ಪಂಚಾಯತದ ಸಂಪೂರ್ಣ ಬೆಂಬಲದಡಿ ಮಹಾನಗರ ಪಾಲಿಕೆ, ನಗರ ಸಭೆ, ಪುರಸಭೆ, ಪಟ್ಟಣ ಪಂಚಾಯತ, ಗ್ರಾಮ ಪಂಚಾಯತಗಳು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯೊಂದಿಗೆ ವಿವಿಧ ಇಲಾಖೆಗಳ ಸಹಕಾರ ಮತ್ತು ಬೆಂಬಲದೊಂದಿಗೆ ಈ ಗುರಿಯನ್ನು ಸಾಧಿಸಲಾಗಿದೆ. ಇದಕ್ಕಾಗಿ ಶ್ರಮಿಸಿದ ಪ್ರತಿಯೊಬ್ಬರಿಗೂ ಜಿಲ್ಲಾಡಳಿತದ ಪರವಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಅಭಿನಂದಿಸುತ್ತದೆ ಎಂದು ಅವರು ತಿಳಿಸಿದ್ದಾರೆ.

## ಸಾಹಿತ್ಯ ಸಿಂಚನ

...ಮಳೆರಾಯ...

ಬರಗಾಲ ಮಾಡಿ ಕೂಗಿ ಕೂಗಿ ಯಾಕ ನಗತಿ
ಮಳೆರಾಯ
ಯಾಕ ನೀ ಮಳೆರಾಯ ಬರಗಾಲ ಮಾಡಿ ಕೂಗಿ
ಕೂಗಿ ನಗತಿ

ಯಾರ ಚಾಡಿ ಹೇಳ್ಯಾರ ನಿಂಗ
ಬರಗಾಲ ಮಾಡಿ ನೆಲದ ಮ್ಯಾಗ ಹರಿತಿಲ್ಲ ಹನಿ
ನೀರ
ಮನೆಯನ ಬಸವಣ್ಣ
ನಿಂತ ಹಾಕ್ತವ ಬದ್ವಿಗೆ ಹುಸಿರ

ದುಃಖ ವಡಾಲಗ ತುಂಬಿಕೊಂಡು ಹೆಂಡತಿ ಅಳ್ತಾಳ
ಸೇರಗ ಮುಚ್ಕೊಂಡು
ಹೊಲದಾಗ ನಿಂತ ಹೇಳ್ತಾಳ ಬಿಟ್ಟುಬಿಡು
ಮಳೆರಾಯ ಈನ್ನ ನಮನ್ನ

ದಗದಗ ಉರಿತೈತಿ ಎದಿಯಾಗ ಉರಿಯಾ
ಆಳ್ತಾವ ಬಸವಣ್ಣ ಬರತೈತಿ ಒಂದೇ ಸಮನೆ
ಬಾಯಿಯಾಗ ನೊರೆಯ
ದುಃಖವೆಂಬುದು ನಂಗೆ ಕೊಡು ದೊರೆಯ
ಬಸವಣ್ಣಗ ಹಾಕಬೇಡ ಹೊರೆಯಾ

ಹೊಲದಾಗ ನಿಂತ ಮುಗಿಲ ನೋಡಿ ನೋಡಿ
ಅಳು ಬರುತೈತಿ ಬಸವಣ್ಣನ ಗೋಳು ನೋಡಿ
ನನಗಾಗಿ ಬೇಡ ತಂದೆ
ಆ ಬಸವಣ್ಣನಿಗಾಗಿ ಕೊಡು ಹನಿ
(ಬೊಗೋಸಿ)ನೀರ

ಕಾಣದಂಗ ಗಂಟಲ ನೋವ
ಮರಗತೈತಿ ನೋಡು ಆ ಜೀವ
ದುಃಖ ವಳಿಯಾಗ ನಿಂತೈತಿ
ಜೋಡೆತ್ತಿನ ಜೀವ
ನಿಂಗ ನಾ ಕೈ ಮುಗಿಯಾವ

ಬರಲಿ ಮಳಿ ಹನಿ ಹನಿಯಾಗಿ
ಈಜುನು ಬಸವಣ್ಣ ನಾನು ನೀನು ಹೋಳಿಯಾಗ
ಬಂದೆ ಬರತಾನ ಮಳೆರಾಯ
ಹತ್ತೋನು ಬಾ ಬಾಳೆದ ಬಂಡೇಗಾ
ಸೂರ್ಯ ಚಂದ್ರರು ಸಾಕ್ಷಿ ನಮ್ಮ ಬಾಳಿಯಾಕ

ಎಸ್, ದುರಗಪ್ಪ ಕುಷ್ಟಗಿ

## ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಗೆ ಸಿ ಟಿ ಸ್ಕ್ಯಾನ್, ಎಮ್ ಆರ್ ಐ ಮತ್ತು ಡಯಲಿಸಸ್ ಸ್ಥಾಪಿಸಲು ವಿಧಾನಪರಿಷತ್ ಸದಸ್ಯ ಬಸನಗೌಡ ಬಾದರ್ಲಿ ಮನವಿ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಯ ಅಭಿವೃದ್ಧಿ ವಿಚಾರವಾಗಿ ಮಾನ್ಯ ಅರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಚಿವರಾದ ಶ್ರೀ ಸನ್ಮಾನ್ಯ ದಿನೇಶ್ ಗುಂಡೂರಾವ್ ವರನ್ನು ನಮ್ಮೆಲ್ಲರ ನೆಚ್ಚಿನ ನಾಯಕರು,**



ಕರ್ನಾಟಕ ವಿಧಾನಪರಿಷತ್ ಶಾಸಕರಾದ ಶ್ರೀ ಬಸನಗೌಡ ಬಾದರ್ಲಿ ಅವರು ಭೇಟಿ ಮಾಡಿ ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಗೆ ಸಿ ಟಿ ಸ್ಕ್ಯಾನ್, ಎಮ್ ಆರ್ ಐ ಮತ್ತು ಡಯಲಿಸಸ್ ಸ್ಥಾಪಿಸುವ ಬಗ್ಗೆ ಚರ್ಚಿಸಿದರು. ಈ ವೇಳೆ ಮಸ್ಕಿ ಕ್ಷೇತ್ರದ ಶಾಸಕರಾದ ಶ್ರೀ ಆರ್. ಬಸನಗೌಡ ತುರ್ವಿಹಾಳ, ಕಾಂಗ್ರೆಸ್ ಪಕ್ಷದ ಯುವ ಮುಖಂಡರಾದ ಶ್ರೀ ರವಿ ಬೋಸರಾಜು ಉಪಸ್ಥಿತರಿದ್ದರು.

# ನೆಲೆ ಇಲ್ಲದ ವಯಸ್ಕರ ಬುದ್ಧಿಮಾಂದ್ಯಳಾದ ಶಶಿಕಲಾ ಅವರಿಗೆ ಆಸರೆಯಾದ ಕಾರುಣ್ಯಾಶ್ರಮ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಡಿ 26 ರಾಯಚೂರಿನ ರಿಮ್ಸ್ ಮೆಡಿಕಲ್ ಕಾಲೇಜಿನ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಖಿ ಒನ್ ಸ್ಟಾಫ್ ಸೆಂಟರ್ ನಲ್ಲಿ ಸುಮಾರು ದಿನಗಳಿಂದ ಆಶ್ರಯ ಪಡೆದಿದ್ದ ವಯಸ್ಕರ ಬುದ್ಧಿಮಾಂದ್ಯಳಾದ ಶಶಿಕಲಾ ವಯಸ್ಸು-32 ಇವರಿಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳ ಸಖಿ ಒನ್ ಸ್ಟಾಪ್ ಸೆಂಟರ್ ನ ಆಡಳಿತಾಧಿಕಾರಿಗಳಾದ ಭಾಗ್ಯವತಿ ಇವರುಗಳ ಕೋರಿಕೆಯ ಮೇರೆಗೆ ಸಿಂಧನೂರಿನ ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮಕ್ಕೆ ಕರೆತಂದು ಆಶ್ರಯ ನೀಡಲಾಯಿತು.**

ಈ ಸಂದರ್ಭದಲ್ಲಿ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸಯ್ಯ ಸ್ವಾಮಿ ಹಿರೇಮಠ ಮಾತನಾಡಿ ವಯಸ್ಕರ ಬುದ್ಧಿಮಾಂದ್ಯಳಾದ ಶಶಿಕಲಾ ಇವರಿಗೆ ಕನ್ನಡ ಮಾತನಾಡಲು ಬರುತ್ತಿಲ್ಲ. ಮೂಲತ



ಇವರ ವಿಳಾಸವನ್ನು ತಿಳಿಸುತ್ತಿಲ್ಲ ಇವರ ಘೋರವಾದ ಸ್ಥಿತಿಯನ್ನು ಅರಿತುಕೊಂಡು ನಾವು ಮಾನವೀಯತೆಯ ದೃಷ್ಟಿಯಿಂದ ಇಲಾಖೆಯ ಒಪ್ಪಿಗೆ ಮೇರೆಗೆ ಈ ಸಹೋದರಿಗೆ ತಾತ್ಕಾಲಿಕ ಆಶ್ರಯ ನೀಡುತ್ತಿದ್ದೇವೆ. ಇಂತಹ ಅದೆಷ್ಟೋ ಹೆಣ್ಣು ಮಕ್ಕಳನ್ನು ತಾಯಂದಿರನ್ನು ಕಾಪಾಡುವ ಕಾರ್ಯಕ್ಕೆ ಕಾರಣರಾದ ದಾನಿಗಳೇ ನಮ್ಮ ನಡೆದಾಡುವ ದೇವರುಗಳು.

ಸುಮಾರು ಇಪ್ಪು ವರ್ಷಗಳ ಕಾಲ ಸರ್ಕಾರ ನಮ್ಮ ಸಮಸ್ಯೆಯ ಬಗ್ಗೆ ತಲೆ ಕೆಡಿಸಿಕೊಳ್ಳದಿರುವುದು ಮತ್ತು ವಿಶೇಷವಾಗಿ ಸಿಂಧನೂರಿನ ಜನಪ್ರತಿನಿಧಿಗಳು ವಾಸ್ತವ ಸ್ಥಿತಿಯನ್ನು ನೋಡುತ್ತಿದ್ದರು ಸಹ ನಮಗೆ ಸ್ವಂತ ಜಾಗ ಮತ್ತು ಅನುದಾನ ಕೊಡಿಸದಿರುವುದು. ಇನ್ನೂ ಹೆಚ್ಚಿನ ಸೇವೆ ಮಾಡಲು ಸ್ಫೂರ್ತಿಯಾಗಿದೆ. ಕಷ್ಟದಲ್ಲಿರುವವರನ್ನು ಕಾಪಾಡುವುದು ಅನಾಥ ಜೀವಿಗಳಿಗೆ ಬದುಕು ಕಟ್ಟಿಕೊಡುವುದು ಅವರೆಲ್ಲಾ ನೋವುಗಳನ್ನು ಮರೆಸಿ ಇರುವಷ್ಟು ದಿನ ಅವರನ್ನು ತಂದೆ-ತಾಯಿಗಳು ಸಹೋದರ ಸಹೋದರಿಯರು ಎನ್ನುವ ಭಾವನೆಯನ್ನಿಟ್ಟುಕೊಂಡು ಸೇವೆ ಮಾಡುವ ಕಾರ್ಯಗಳೆ ನಮ್ಮ ಸಂಸ್ಥೆಯ ಮೂಲ ಉದ್ದೇಶಗಳಾಗಿವೆ. ಮತ್ತು ಪ್ರತಿಯೊಂದು ಶಾಲಾ ಕಾಲೇಜುಗಳಲ್ಲಿಯೂ ಸಹ ನಾವು ನಮ್ಮ ಸಂಸ್ಥೆಯ ಮೂಲಕ ವಿದ್ಯಾರ್ಥಿಗಳಲ್ಲಿ ಹಲವಾರು ಜಾಗೃತಿಗಳನ್ನು ಮಾಡುವ ಮೂಲಕ ವೃದ್ಧಾಶ್ರಮಗಳ ಸ್ಥಿತಿಗತಿಗಳ ಮೂಲಕ ಜಾಗೃತಿ ಮೂಡಿಸುತ್ತಿದ್ದೇವೆ.

ಎಲ್ಲಾ ಕಾರ್ಯಗಳಿಗೆ ದಾನಿಗಳೇ ಮೂಲ ಕಾರಣೀಕರ್ತರು ಎಂದು ಮಾತನಾಡಿ ರಿಮ್ಸ್ ಮೆಡಿಕಲ್ ಕಾಲೇಜಿನ ಸಖಿ ಒನ್ ಸ್ಟಾಪ್ ಸಿಬ್ಬಂದಿಗಳಿಗೆ ಧನ್ಯವಾದಗಳನ್ನು ಅರ್ಪಿಸಿದರು. ಈ ಸಮಯದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ರಿಮ್ಸ್ ಮೆಡಿಕಲ್ ಕಾಲೇಜಿನ ಸಖಿ ಒನ್ ಸ್ಟಾಪ್ ಸೆಂಟರ್ ನ ಆಡಳಿತಾಧಿಕಾರಿಗಳಾದ ಭಾಗ್ಯವತಿ ಆಪ್ತ ಸಮಾಲೋಚಕರಾದ ಸುಮಲತಾ. ಮತ್ತು ಆಶ್ರಮದ ಸಿಬ್ಬಂದಿಗಳಾದ ಬಸವ ಸ್ವಾಮಿ ಅನೇಕರು ಉಪಸ್ಥಿತರಿದ್ದರು.

# ವಿಶ್ವ ವಿಕಲಚೇತನರ ದಿನಾಚರಣೆ ಹಾಗೂ ಸಮನ್ವಯ ಸಭೆ




ನೈಜ್ಯ ದೆಸೆ ನ್ಯೂಸ್

**ಮಾನ್ವಿ: ತಾಲೂಕಿನ ಉಟಕನೂರು ಗ್ರಾಮ ಪಂಚಾಯಿತಿ ಕಾರ್ಯಾಲಯದಲ್ಲಿ ಜಿಲ್ಲಾಧಿಕಾರಿಗಳ ಕಾರ್ಯಾಲಯ?ನಗರಾಭಿವೃದ್ಧಿ ಕೋಶ, ರಾಯಚೂರು, ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ, ರಾಯಚೂರು ಹಾಗೂ ಪಟ್ಟಣ ಪಂಚಾಯತ್ ಕಾರ್ಯಾಲಯ, ಸಿರವಾರ ಇವರ ಸಂಯುಕ್ತಾಶ್ರಯದಲ್ಲಿ ವಿಶ್ವ ವಿಕಲಚೇತನರ ದಿನಾಚರಣೆ ಹಾಗೂ ವಿಕಲಚೇತನರ ಸಮನ್ವಯ ಸಭೆ ಯಶಸ್ವಿಯಾಗಿ ನಡೆಯಿತು.**

ಸಭೆಯಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮಹಮ್ಮದ್ ಜುಬೇದ ಮಾತನಾಡಿ, ವಿಕಲಚೇತನರಿಗೆ ಸರ್ಕಾರದ ವಿವಿಧ ಯೋಜನೆಗಳು, ಸೌಲಭ್ಯಗಳು ಹಾಗೂ ಹಕ್ಕುಗಳ ಕುರಿತು ಮಾಹಿತಿ ನೀಡಿದರು. ವಿಕಲಚೇತನರು ಸಮಾಜದ ಮುಖ್ಯಧಾರೆಯಲ್ಲಿ ಗೌರವಪೂರ್ಣವಾಗಿ ಬದುಕಲು ಅಗತ್ಯವಾದ ಬೆಂಬಲವನ್ನು ಎಲ್ಲಾ ಇಲಾಖೆಗಳು ಸಮನ್ವಯದಿಂದ ಒದಗಿಸಬೇಕು ಎಂದು ತಿಳಿಸಿದರು. ವಿಕಲಚೇತನರ ಸಮಸ್ಯೆಗಳನ್ನು ಸ್ಥಳೀಯ ಮಟ್ಟದಲ್ಲೇ ಪರಿಹರಿಸಲು ಪಂಚಾಯಿತಿ ಸದಾ ಸಹಕಾರ ನೀಡಲಿದೆ ಎಂದು ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ಪಂಚಾಯತಿ ಕಾರ್ಯದರ್ಶಿ ದೇವೇಂದ್ರಪ್ಪ, ಬಸವರಾಜ, ಸಂಕಲ್ಪ ವಿಕಲಚೇತನರ ಒಕ್ಕೂಟದ ಗೌರವಾಧ್ಯಕ್ಷ ದೇಸಾಯಿ ದೊತರಬಂಡಿ, ಯಲ್ಲಪ್ಪ ದೊತರಬಂಡಿ, ಗ್ರಾಮೀಣ ಪುನರ್ವಸತಿ ಕಾರ್ಯಕರ್ತೆ ನಿರ್ಮಲಾ ಸೇರಿದಂತೆ ಅನೇಕ ವಿಕಲಚೇತನರು ಉಪಸ್ಥಿತರಿದ್ದು, ತಮ್ಮ ಸಮಸ್ಯೆಗಳು ಹಾಗೂ ಅಗತ್ಯಗಳ ಬಗ್ಗೆ ಚರ್ಚಿಸಿದರು. ಸಭೆಯ ಮೂಲಕ ವಿಕಲಚೇತನರ ಕಲ್ಯಾಣಕ್ಕಾಗಿ ಇನ್ನಷ್ಟು ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳುವ ಅಗತ್ಯವಿದೆ ಎಂಬ ಅಭಿಪ್ರಾಯ ವ್ಯಕ್ತವಾಯಿತು.

# ಮಸ್ಕಿ: ತಾಲೂಕಿನ ಎಲ್ಲಾ ಡಿಈಓ ಗಳು ಒಗ್ಗಟ್ಟಾಗಿ ಕೆಲಸ ಮಾಡಿ: ಅಮರೇಶ್ ಯಾದವ

ನೈಜ್ಯ ದೆಸೆ ನ್ಯೂಸ್

**ಮಸ್ಕಿ ತಾಲೂಕ ಪಂಚಾಯತ ಕಾರ್ಯಾಲಯದಲ್ಲಿ ಕರ್ನಾಟಕ ರಾಜ್ಯ ಕ್ಲರ್ಕ ಕಮ್ ಡಾಟಾ ಎಂಟ್ರಿ ಆಪರೇಟರ್ ಕ್ಷೇಮಾಭಿವೃದ್ಧಿ ಸಂಘ ಮಸ್ಕಿ ಘಟಕದ ವತಿಯಿಂದ ಕಂಪ್ಯೂಟರ್ ಜನಕ ಶ್ರೀ ಚಾಲ್ಸ್9 ಬ್ಯಾಬೇಜ್ ಜನ್ಮ ದಿನವನ್ನು ಕಂಪ್ಯೂಟರ್ ಆಪರೇಟರ್ ದಿನ ಎಂದು ಆಚರಿಸಲಾಯಿತು.**

ಕಾರ್ಯಕ್ರಮದ ಕುರಿತು ತಾಲೂಕು ಪಂಚಾಯಿತಿ ಇಓ ಅಮರೇಶ್ ಯಾದವ್ ಮಾತನಾಡಿ ಎಲ್ಲಾ ಡಿಇಓ ಗಳು ಒಗ್ಗಟ್ಟಿನಿಂದ ಕೆಲಸ ಮಾಡಿ, ತಾಲೂಕಿಗೆ ಪ್ರಗತಿ ಅಭಿವೃದ್ಧಿ ಪೂರಕ ಕಾರ್ಯ ಮಾಡಬೇಕು , ಯಾವುದೇ ಕುಂದು ಕೊರತೆಗಳು ಇದ್ದರೆ ಮನವಿ ಪತ್ರದ ಮೂಲಕ ತಾಲೂಕ ಪಂಚಾಯತಿಗೆ ಸಲ್ಲಿಸಲು ತಿಳಿಸಿದರು.



ನಂತರ ಮಾತನಾಡಿದ ಡಾಟಾ ಎಂಟ್ರಿ ಆಪರೇಟರ್ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ರಂಗಪ್ಪ ಹಾಲಾಪೂರ ಇಂತಹ ಕಾರ್ಯಕ್ರಮಗಳು ಯಶಸ್ವಿಯಾಗಬೇಕಾದರೆ ಎಲ್ಲಾ ಸಿಬ್ಬಂದಿಗಳ ಅವಶ್ಯಕತೆ ಇದ್ದು ನಮ್ಮ ಸಿಬ್ಬಂದಿಗಳ ಕುಂದುಕೊರತೆಗಳಿದ್ದರೆ ಮೇಲಾಧಿಕಾರಿಗಳ ಗಮನಕ್ಕೆ ತರಲು ಬಯಸುತ್ತೇನೆ ಎಂದು ರಂಗಪ್ಪ ಹಾಲಾಪೂರ ಹೇಳಿದರು.

ನಂತರ ಸೇವೆ ಸಲ್ಲಿಸಿದ ಸಿಬ್ಬಂದಿಗಳಿಗೆ ಗೌರವಿಸಿ ಸನ್ಮಾನಿಸಲಾಯಿತು. ಸಹಾಯಕ ನಿರ್ದೇಶಕರಾದ ಶಿವಾನಂದ ರೆಡ್ಡಿ, ಗಿರಿಯಪ್ಪ ಉದ್ಬಾಳ, ವೆಂಕಟೇಶ್ ಪಾಮನಕಲ್ಲೂರು, ಬಸವರಾಜ ಕಡಬುರು, ಪರಣ್ಣ ಪಾಮನಕಲ್ಲೂರು, ರಸುಲ್, ಯಾಸಿನ್, ಶರಣಬಸವ ತಲೇಕಾನ, ಅಮೆರೇಗೌಡ ಮುಟ್ಟೂರು, ಬಲವೇಂದ್ರ ಅಂಕುಶದೂಡ್ಡಿ, ದುರ್ಗೇಶ ಗುಂಡ ಇವರನ್ನು ಸನ್ಮಾನಿಸಲಾಯಿತು. ಸಂಘದ ಉಪಾಧ್ಯಕ್ಷರಾದ ಬಸವರಾಜ ಕೋಳಬಾಳ, ನಾಗಪ್ಪ ಬಪ್ಪೂರು, ಶರಣಬಸವ ತಲೇಖಾನ್, ಬಸವರಾಜ ಸಂತೆಕಲ್ಲೂರು, ನಾಗರಾಜ ಅಡವಿಬಾವಿ, ಹರೀಶ್ ಹಿರೇದಿನ್ನಿ, ಶರಣಬಸವ ಮಲ್ಲದಗುಡ್ಡ, ವೀರಭದ್ರಯ್ಯ ತೋರಣದಿನ್ನಿ ಹಾಗೂ ಇತರರು ಇದ್ದರು. ಶರಣಬಸವ ತಲೇಕಾನ ಕಾರ್ಯಕ್ರಮ ನಿರೂಪಿಸಿ ಹೊಂದಿಸಿದರು.

# ಎಸ್ ಎಲ್ ವಿ ಪಬ್ಲಿಕೇಷನ್ಸ್ ತುರ್ವಿಹಾಳ ಇವರಿಂದ ಸರಕಾರಿ ಶಾಲಾ ಮಕ್ಕಳಿಗೆ ಉಚಿತ ಸ್ಪರ್ಧಾತ್ಮಕ ಪುಸ್ತಕಗಳ ವಿತರಣೆ




ನೈಜ್ಯ ದೆಸೆ ನ್ಯೂಸ್

**ತುರ್ವಿಹಾಳ: ಸಿಂಧನೂರು ಪಟ್ಟಣದ ತುರ್ವಿಹಾಳ ಪಟ್ಟಣದಲ್ಲಿ ಎಸ್ ಎಲ್ ವಿ ಪಬ್ಲಿಕೇಷನ್ಸ್ ತುರ್ವಿಹಾಳ ಇವರಿಂದ ಸರಕಾರಿ ಶಾಲಾ ಮಕ್ಕಳಿಗೆ ಉಚಿತ ಸ್ಪರ್ಧಾತ್ಮಕ ಪುಸ್ತಕಗಳ ಕೊಡುಗೆ.**

ಡಿಸೆಂಬರ್-26 ಸಿಂಧನೂರು ತಾಲೂಕಿನ ಸ ಹಿ ಪ್ರಾ ಶಾಲೆ ನಾಗಲಿಂಗೇಶ್ವರ ಕ್ಯಾಂಪ್ ಶಾಲೆಯಲ್ಲಿ 5ನೇ ತರಗತಿಯಲ್ಲಿ ಓದುತ್ತಿರುವ ಮಕ್ಕಳಿಗೆ ಲೇಖಕರು/ತರಬೇತುದಾರರು ಎಸ್ ಎಲ್ ವ್ಹಿ ಪಬ್ಲಿಕೇಷನ್ಸ ತುರವಿಹಾಳ ಇವರು ಸದರಿ ಶಾಲಾ ಮಕ್ಕಳಿಗೆ ಉಚಿತವಾಗಿ ಮುರಾರ್ಜಿ ವಸತಿ ಶಾಲೆಗೆ ಆಯ್ಕೆಬಯಸಿ ಪರೀಕ್ಷೆ ಬರೆಯಲು ಮುರಾರ್ಜಿ ಅಸ್ತ್ರ-25 ಮಾದರಿ ಪ್ರಶ್ನೆಪತ್ರಿಕೆಗಳನ್ನು ಮಕ್ಕಳಿಗೆ ಉಚಿತವಾಗಿ ನೀಡಿದರು ಲೇಖಕರಿಗೆ ಸದರಿ ಶಾಲೆಯ ಮುಖ್ಯ ಗುರುಗಳು/ಹಾಗೂ ಸಿಬ್ಬಂದಿ ವರ್ಗ ಮತ್ತು ಎಸ್ ಡಿ ಎಂ ಸಿ ಅಧ್ಯಕ್ಷರು ಹಾಗೂ ಎಲ್ಲ ಗೌರವಾನ್ವಿತ ಸದಸ್ಯರು ಗ್ರಾಮ ಪಂಚಾಯತ್ ಸದಸ್ಯರು ಗ್ರಾಮದ ಗುರು ಹಿರಿಯರು ಹಾಗೂ ಮಕ್ಕಳ ಪರವಾಗಿ ಹೃದಯಪೂರ್ವಕ ಧನ್ಯವಾದಗಳನ್ನು ಲೇಖಕರಿಗೆ ಎಸ್ ಎಲ್ ವ್ಹಿ ಪಬ್ಲಿಕೇಷನ್ಸ ತುರವಿಹಾಳ ಅವರಿಗೆ ಸಲ್ಲಿಸಿದರು.

# ಸ್ಟಾಫ್ ನರ್ಸ್ ಜ್ಯೋತಿ ಅನುಮಾನಾಸ್ಪದ ಸಾವು ಆರೋಪಿಗಳನ್ನು ಬಂಧಿಸಿ, ಕುಟುಂಬಕ್ಕೆ ಪರಿಹಾರ ನೀಡಿ

ನೈಜ್ಯ ದೆಸೆ ನ್ಯೂಸ್

**ಲಿಂಗಸುಗೂರು: ಡಿ 27 ತಾಲೂಕಿನ ಹಟ್ಟಿ ಚಿನ್ನದ ಗಣಿ-ಪಾಮನಕಲ್ಲೂರು ಮುಖ್ಯ ರಸ್ತೆಯಲ್ಲಿ ನಡೆದ ಸ್ಟಾಫ್ ನರ್ಸ್ ಕುಮಾರಿ ಜ್ಯೋತಿ (32) ಅವರ ಅನುಮಾನಾಸ್ಪದ ಸಾವು ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ, ಆರೋಪಿಗಳನ್ನು ಕೂಡಲೇ ಬಂಧಿಸಿ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಹಾಗೂ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡಬೇಕೆಂದು ದಲಿತ ಸಂಘಟನೆಗಳ ಸಂಯುಕ್ತ ವೇದಿಕೆ ಸಹಾಯಕ ಆಯುಕ್ತರಿಗೆ ಮನವಿಯನ್ನು ಸಲ್ಲಿಸಿದರು.**

ದಿನಾಂಕ 22-12-2025 ರಂದು ನಡೆದ ಈ ಘಟನೆಯ ಕುರಿತು ಮಾತನಾಡಿದ ದಲಿತ ಮುಖಂಡರು, ರಾಯಚೂರು ರಿಮ್ಸ್ ಆಸ್ಪತ್ರೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸ್ಟಾಫ್ ನರ್ಸ್ ಜ್ಯೋತಿ ಅವರು ಸಾವಿರಾರು ಜನರಿಗೆ ಚಿಕಿತ್ಸೆ ನೀಡುತ್ತಿದ್ದ ಜವಾಬ್ದಾರಿಯುತ ಸ್ಟಾಫ್ ನರ್ಸ್ ಆಗಿದ್ದು, ಈ ರೀತಿಯಾಗಿ ಆತ್ಮಹತ್ಯೆ ಮಾಡಿಕೊಂಡಿರುವದಕ್ಕೆ ಸಾಧ್ಯತೆಯೇ ಇಲ್ಲ ಎಂದು ಕುಟುಂಬಸ್ಥರು ಶಂಕೆ ವ್ಯಕ್ತಪಡಿಸಿದ್ದಾರೆ.




21-12-2025 ರ ರವಿವಾರ ಮಧ್ಯಾಹ್ನ 3 ಗಂಟೆ ಸುಮಾರಿಗೆ ಜ್ಯೋತಿ ಮನೆಯಿಂದ ಹೊರಟಿದ್ದು, ಸ್ನೇಹಿತರ ಮನೆಗೆ ಹೋಗಿ ಬರುವುದಾಗಿ ತಿಳಿಸಿದ್ದಾಳೆ. ಆದರೆ ಸೋಮವಾರ ಮಧ್ಯಾಹ್ನದವರೆಗೂ ಮನೆಗೆ ಬಾರದೆ ಇದ್ದ ಹಿನ್ನೆಲೆಯಲ್ಲಿ ಕುಟುಂಬಸ್ಥರು ಆತಂಕಗೊಂಡಿದ್ದರು. ಬಳಿಕ ರಸ್ತೆಯ ಪಕ್ಕದಲ್ಲಿ ನಿಂತಿದ್ದ ರೋಡ್ ರೋಲರ್ ವಾಹನಕ್ಕೆ ನೇಣು ಹಾಕಿಕೊಂಡಿರುವ ಸ್ಥಿತಿಯಲ್ಲಿ ಜ್ಯೋತಿ ಶವ ಪತ್ತೆಯಾಗಿದೆ ಎಂಬ ಮಾಹಿತಿ ಲಭ್ಯವಾಗಿದೆ.

ಸ್ಥಳಕ್ಕೆ ಆಗಮಿಸಿದ ಕುಟುಂಬಸ್ಥರು, ಇದು ಆತ್ಮಹತ್ಯೆಯಲ್ಲ, ಪೂರ್ವಯೋಜಿತ ಕೊಲೆ ಎಂದು ಆರೋಪಿಸಿದ್ದಾರೆ. ದಲಿತ ಮುಖಂಡರ ಪ್ರಕಾರ, ಜ್ಞಾನಮೂರ್ತಿ ತಂದೆ ಯಂಕೋಬ ಕಳೆದ 2?3 ವರ್ಷಗಳಿಂದ ಜ್ಯೋತಿಯನ್ನು ಪ್ರೀತಿಸುತ್ತಿದ್ದ ಹಿನ್ನೆಲೆಯಲ್ಲಿ, ಆಕೆಯನ್ನು ಮನೆಗೆ ಕರೆಸಿ ಅವಾಚ್ಯವಾಗಿ ನಿಂದಿಸಿ, ಜಾತಿ ಕಾರಣ ನೀಡಿ ಮದುವೆಗೆ ನಿರಾಕರಿಸಿದ್ದಾರೆ. ನಂತರ ಕುಟುಂಬದವರು ಸೇರಿಕೊಂಡು ಆಕೆಯನ್ನು ಹತ್ಯೆ ಮಾಡಿ, ಆತ್ಮಹತ್ಯೆ ಎಂದು ಬಿಂಬಿಸುವ ಉದ್ದೇಶದಿಂದ ರೋಡ್ ರೋಲರ್‌ಗೆ ನೇತು ಹಾಕಿರುವ ಸ್ಥಿತಿಯಲ್ಲಿ ತೋರಿಸಿದ್ದಾರೆ ಎಂದು ಆರೋಪಿಸಿದರು. ಇದೇ ಸಂದರ್ಭದಲ್ಲಿ ಇತ್ತೀಚೆಗೆ ಹುಬ್ಬಳ್ಳಿಯಲ್ಲಿ ಅನ್ಯಜಾತಿಯ ಯುವತಿ ದಲಿತ ಯುವಕನನ್ನು ಮದುವೆಯಾದ ಕಾರಣಕ್ಕೆ ಏಳು ತಿಂಗಳ ಗರ್ಭಿಣಿಯನ್ನು ಸ್ವಂತ ತಂದೆಯೇ ಕೊಲೆ ಮಾಡಿದ ಘಟನೆ ಉಲ್ಲೇಖಿಸಿದ ಅವರು, ರಾಜ್ಯದಲ್ಲಿ ಮರ್ಯಾದೆ ಹತ್ಯೆ ಹಾಗೂ ದಲಿತರ ಮೇಲಿನ ದೌರ್ಜನ್ಯ ಪ್ರಕರಣಗಳು ಹೆಚ್ಚುತ್ತಿರುವುದು ತಲೆತಗ್ಗಿಸುವ ಸಂಗತಿ ಎಂದರು. ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ 13,154 ಕ್ಕೂ ಹೆಚ್ಚು ದಲಿತರ ಮೇಲೆ ದೌರ್ಜನ್ಯ ಪ್ರಕರಣಗಳು ದಾಖಲಾಗಿವೆ ಎಂದು ಹೇಳಿದರು.

ಆದ್ದರಿಂದ ಜ್ಯೋತಿ ಸಾವು ಹಾಗೂ ಹುಬ್ಬಳ್ಳಿ ಪ್ರಕರಣದ ಎಲ್ಲಾ ಆರೋಪಿಗಳನ್ನು ಕೂಡಲೇ ಬಂಧಿಸಿ, ಕಠಿಣ ಕಾನೂನು ಕ್ರಮ ಜರುಗಿಸಬೇಕು. ಎರಡೂ ಕುಟುಂಬಗಳಿಗೆ ಸೂಕ್ತ ಪೊಲೀಸ್ ರಕ್ಷಣೆ ಒದಗಿಸಬೇಕು ಹಾಗೂ ಇಂತಹ ಘಟನೆಗಳು ಮರುಕಳಿಸದಂತೆ ಸರ್ಕಾರ ವಿಶೇಷ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ರುದ್ರಪ್ಪ ಬ್ಯಾಗಿ (ಮಾಜಿ ಪುರಸಭೆ ಸದಸ್ಯ), ಮೋಹನ್ ಗೋಸ್ಲೆ (ಖಅ/ಖಖ ದೌರ್ಜನ್ಯ ನಿಯಂತ್ರಣ ಜಾಗೃತಿ ಸಮಿತಿ ಸದಸ್ಯ), ರಮೇಶ್ ಗೋಸ್, ಪ್ರಭುಲಿಂಗ ಮ್ಯಾಗಮನಿ, ಕಿರಣಕುಮಾರ ಚಿಕ್ಕಹೆಸರೂರು, ಶಿವಣ್ಣ ಮಾಚನೂರು, ಪ್ರದೀಪ್ ಮುತ್ತು, ಆಂಜನೇಯ ಭಂಡಾರಿ, ಚಿನ್ನಪ್ಪ ರಾರಾವಿ, ಅಮರೇಶ ಮ್ಯಾಗೇರಿ, ಹನುಮಂತ ಮುದಗಲ್ ಸೇರಿದಂತೆ ಹಲವಾರು ದಲಿತ ಮುಖಂಡರು ಉಪಸ್ಥಿತರಿದ್ದರು.

## ನೇಮಕಾತಿ ಪ್ರಕಟಣೆ

ನೇಮಕಾತಿ 2025–23 ಬ್ಲಾಕ್ ಮ್ಯಾನೇಜರ್ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ KSRLPS ನೇಮಕಾತಿ 2025: 23 ಬ್ಲಾಕ್ ಮ್ಯಾನೇಜರ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಪ್ರಚಾರ ಸಂಘವು ಡಿಸೆಂಬರ್ 2025 ರ KSRLPS ಅಧಿಕೃತ ಅಧಿಸೂಚನೆಯ ಮೂಲಕ ಬ್ಲಾಕ್ ಮ್ಯಾನೇಜರ್ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ದಾವಣಗೆರೆ, ಬೆಂಗಳೂರು ಕರ್ನಾಟಕ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 31–ಡಿಸೆಂಬರ್–2025 ರಂದು ಅಥವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಸಂಸ್ಥೆಯ ಹೆಸರು: ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಪ್ರವರ್ತನಾ ಸಂಘ (KSRLPS) ಹುದ್ದೆಗಳ ಸಂಖ್ಯೆ: 23ಉದ್ಯೋಗ ಸ್ಥಳ: ದಾವಣಗೆರೆ, ಬೆಂಗಳೂರು ಕರ್ನಾಟಕ ಹುದ್ದೆ ಹೆಸರು: ಬ್ಲಾಕ್ ಮ್ಯಾನೇಜರ್ ಸಂಬಳ: KSRLPS ಮಾನದಂಡಗಳ ಪ್ರಕಾರ, KSRLPS ಹುದ್ದೆಯ ವಿವರಗಳುಪೋಸ್ಟ್ ಹೆಸರು ಹುದ್ದೆಗಳ ಸಂಖ್ಯೆ, ಬ್ಲಾಕ್ ಮ್ಯಾನೇಜರ್–ಫಾರ್ಮ್ ಜೀವನೋಪಾಯ 6 ಬ್ಲಾಕ್ ಮ್ಯಾನೇಜರ್–ಫಾರ್ಮ್ ಅಲ್ಲದ ಜೀವನೋಪಾಯ 2, ಕ್ಲಸ್ಟರ್ ಮೇಲ್ವಿಚಾರಕ 5, ಜಿಲ್ಲಾ ವ್ಯವಸ್ಥಾಪಕ ಕೌಶಲ್ಯ ಮತ್ತು ಹಣಕಾಸು ಸೇರ್ಪಡೆ 1, ಜಿಲ್ಲಾ ವ್ಯವಸ್ಥಾಪಕ–ಜೀವನೋಪಾಯ 1, ಜಿಲ್ಲಾ MIS ಸಹಾಯಕ ಮತ್ತು ಆಇಔ 1, ಕಚೇರಿ ಸಹಾಯಕ 1, ತಾಲೂಕಾ ಕಾರ್ಯಕ್ರಮ ವ್ಯವಸ್ಥಾಪಕ 3, ಕ್ಲಸ್ಟರ್ ಮೇಲ್ವಿಚಾರಕ–ಕೌಶಲ್ಯ 3 Official Website: ksrlps.karnataka.gov.in ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 16–12–2025 ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 31–ಡಿಸೆಂಬರ್–2025

# ಪ್ರಯಾಣಿಕರಿಗೆ ಅನುಕೂಲ ಕಲ್ಪಿಸಲು 16 ನಗರ ಹೊಸ ಬಸ್‌ಗಳಿಗೆ ಚಾಲನೆ: ಶಾಸಕರಾದ ಡಾ.ಶಿವರಾಜ ಎಸ್ ಪಾಟೀಲ್

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು: ಡಿಸೆಂಬರ್ 26 (ಕರ್ನಾಟಕ ವಾರ್ತೆ): ರಾಯಚೂರು ನಗರದ ವಿವಿಧೆಡೆ ನಿತ್ಯ ತೆರಳುವ ಪ್ರಯಾಣಿಕರಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ 16 ನಗರ ಹೊಸ ಬಸ್‌ಗಳಿಗೆ ಚಾಲನೆ ನೀಡಲಾಗಿದ್ದು, ಇದ–ರಿಂದ ಸಾರ್ವಜನಿಕರು, ಮಹಿಳೆಯರು ಹಾಗೂ ಮಕ್ಕಳಿಗೆ ಅನುಕೂಲವಾಗಲಿದೆ ಎಂದು ರಾಯಚೂರು ನಗರ ಕ್ಷೇತ್ರದ ಶಾಸಕರಾದ ಡಾ. ಶಿವರಾಜ ಎಸ್. ಪಾಟೀಲ್ ಅವರು ಹೇಳಿದರು.**

ಡಿಸೆಂಬರ್ 26ರ ಶುಕ್ರವಾರ ದಂದು ನಗರದ ಕೆ.ಕೆ.ಆರ್.ಟಿ.ಸಿ ಮೂರನೇ ಘಟಕದಲ್ಲಿ ಹಮ್ಮಿಕೊಳ್ಳಲಾಗಿದ್ದ 16 ನಗರ ಸಾರಿಗೆ ಬಸ್ಸುಗಳಿಗೆ ಪೂಜಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮವು ನಗರ ಸಾರಿಗೆ ವ್ಯವಸ್ಥೆಯನ್ನು ಇನ್ನಷ್ಟು ಉತ್ತಮಗೊಳಿಸಲು ಮೇ ಟಾಟಾ ಮೋಟಾರ್ಸ್ ತಯಾರಿಕೆಯ ಹೊಸ ನಗರ ಸಾರಿಗೆ



ಬಸ್ಸಗಳನ್ನು ಸೇರ್ಪಡೆಗೊಳಿಸುತ್ತಿರುವುದು ಸಂತಷದ ಸಂಗತಿಯಾಗಿದೆ. ಈ ಬಸ್‌ಗಳಿಗೆ 187 ಎಚ್.ಪಿ. ಸಾಮರ್ಥ್ಯದ ಬಿಎಸ್–6 ಎಂಜಿನ್‌ಗಳನ್ನು ಅಳವಡಿಸಲಾಗಿದ್ದು, ಈ ಬಸ್‌ಗಳನ್ನು ಆಟೋಮೋಟಿವ್ ಇಂ–ಡಸ್ಟ್ರಿ ಸ್ಟ್ಯಾಂಡರ್ಡ್– ಎಐಎಸ್–052 ಬಸ್ ಕೋಡ್ ನಂತೆ ನಿರ್ಮಿಸಲಾಗಿದೆ. ಈ ಬಸ್ ಗಳು 40 ಪ್ರಯಾಣಿಕ ಆಸನಗಳನ್ನು ಹೊಂದಿದ್ದು, ಎಲ್‌ಇಡಿ ಟ್ಯೂಬ್ ಲೈಟ್ ಅಳವಡಿಸುವುದರೊಂದಿಗೆ ಒಳಾಂಗಣವನ್ನು ಉತ್ತಮವಾಗಿ ವಿನ್ಯಾಗೊಳಿಸಲಾಗಿದೆ ಎಂದರು.

ಈ ಬಸ್‌ಗಳಲ್ಲಿ ಪ್ರಯಾಣಿಸುವ ಪ್ರಯಾಣಿಕರ ಸುರಕ್ಷತೆಗಾಗಿ ಒಟ್ಟು ನಾಲ್ಕು ಸಿ.ಸಿ. ಕ್ಯಾಮೆರಾಗಳನ್ನು ಆಳವಡಿಸಿಲಾಗಿದೆ. ಜೊತೆಗೆ ಆಧುನಿಕ ತಂತ್ರಜ್ಞಾನ ಹೊಂದಿರುವ ಸ್ವಯಂ ಚಾಲಿತ ಅಗ್ನಿ ನಂದಕ ಉಪಕರಣಗಳನ್ನು, ರೀವರ್ಸ್ ಪಾಕಿಂಗ್ ಅಲರಾಮ್ ವ್ಯವಸ್ಥೆ ಹಾಗೂ ಲೋಕೆಶನ್ ಟ್ರಾಕಿಂಗ್, ಪ್ಯಾನಿಕ್ ಬಟನಗಳನ್ನು ಅಳವಡಿಸಲಾಗಿದೆ. ಬಸ್‌ಗಳನ್ನು ಸರಿಯಾಗಿ ಉಪಯೋಗಿಸಬೇಕೆಂದು ನಿಗಮದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಈ ವೇಳೆ, ವೇಳೆ ನೂತನ ಬಸ್‌ಗಳಲ್ಲಿ ಶಾಸಕರು ಸಂಚರಿಸಿ ಬಸ್‌ಗಳ ಗುಣಮಟ್ಟ ಪರೀಕ್ಷಿಸಿದರು.





ಇದೇ ಸಂದರ್ಭದಲ್ಲಿ ಮುಖಂಡರಾದ ರವಿ ಜಲ್ದಾರ್, ರಾಯಚೂರು ವಿಭಾಗದ ಸಂಚಾರಿ ಅಧಿಕಾರಿ ಚಂದ್ರಶೇಖರ ಕೆ.ಎಲ್., ವಿಭಾಗದ ತಾಂತ್ರಿಕ ಅಭಿಯಂತರರಾದ ನಾಗರಾಜ್ ವರಾದ್, ಆಡಳಿತ ಅಧಿಕಾರಿ ದೇವರಾಜ್, ಡಿಪೋ ವ್ಯವಸ್ಥಾಪಕ ನಾನೇಗೌಡ, ಭದ್ರತಾ ಮತ್ತು ಜಾಗೃತಿ ಅಧಿಕಾರಿ ಶ್ರೀನಿವಾಸ ಸೇ–ರಿದಂತೆ ವಿವಿಧ ವಿಭಾಗದ ಅಧಿಕಾರಿಗಳು, ಸಿಬ್ಬಂದಿಗಳು ಹಾಗೂ ಮುಖಂಡರು ಇದ್ದರು.

## ಚಬನೂರ ಹಿರೇಮಠದ ಕಾರ್ಯಕ್ರಮಕ್ಕೆ ಕಲಬುರ್ಗಿ ಮಾತೋಶ್ರೀಗಳ ಆಗಮನ

❑ ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ತಾಲೂಕಿನ ಚಬನೂರ ಹಿರೇಮಠದ ಲಿಂಗೈಕ್ಯ ಪೂಜ್ಯ ಶ್ರೀ ರಾಮಲಿಂಗೇಶ್ವರ ಮಹಾಸ್ವಾಮಿಗಳ ನೂತನ ಮಠ ಹಾಗೂ ಕಲ್ಯಾಣ ಮಂಟಪ ಲೋಕಾರ್ಪಣೆ ಕಾರ್ಯಕ್ರಮ ಅಂಗವಾಗಿ ಫೆಬ್ರವರಿ 5ರಂದು ನಡೆಯಲಿರುವ ಮಾತೃ ಮಡಿಲು ವಿಶೇಷ ಕಾರ್ಯಕ್ರಮಕ್ಕೆ ಕಲ್ಬುರ್ಗಿಯ ಶ್ರೀ ಶರಣ ಬಸವೇಶ್ವರ ಪೀಠದ ಮುಖ್ಯಸ್ಥರಾದ ಮಾತೋಶ್ರೀ ದ್ರಾಕ್ಷಾಯಿಣಿ ಅಮ್ಮನವರು ಚಿರಂಜೀವಿ ಶರಣಬಸಪ್ಪ ಅಪ್ಪನವರ ಜೊತೆಗೂಡಿ ಆಗಮಿಸಲಿದ್ದಾರೆ.**



ಡಿಸೆಂಬರ್ 25ರಂದು ಕೊಡೆಕಲ್ಲದ ಪರಮಪೂಜ್ಯ ಶ್ರೀ ಶಿವಕುಮಾರ ಮಹಾಸ್ವಾಮಿಗಳ ನೇತೃತ್ವದಲ್ಲಿ ಶ್ರೀ ಮಠಕ್ಕೆ ಆಮಂತ್ರಣ ನೀಡಲು ಹೋದ ಪರಮ ಪೂಜ್ಯರ ನಿಯೋಗಕ್ಕೆ ಅವರು ಕಾರ್ಯಕ್ರಮದಲ್ಲಿ ಭಾಗವಹಿಸಲು ತಮ್ಮ ಒಪ್ಪಿಗೆಯನ್ನು ನೀಡಿದ್ದಾರೆ. ಈ ಸಂದರ್ಭದಲ್ಲಿ ಕೊಡೆಕಲ್ಲ ಪೂಜ್ಯರು ಕಲ್ಬುರ್ಗಿಯ ಪೀಠಕ್ಕೂ ಹಾಗೂ ಈ ಭಾಗದ ಭಕ್ತರಿಗೂ ಇರುವ ಅವಿನಾಭಾವ ಭಕ್ತಿಯ ಸಂಬಂಧವನ್ನು ತಿಳಿಸಿ ಕಾರ್ಯಕ್ರಮಕ್ಕೆ ಅವರು ಆಗಮಿಸುವುದ–ರಿಂದ ಈ ಭಾಗದ ಭಕ್ತರಿಗೆ ಪುನೀತರಾಗುವ ಅವಕಾಶ ಸಿಗುತ್ತದೆ ಎಂದು ತಿಳಿಸಿದ್ದಾರೆ. ಅವರ ಈ ಆಮಂತ್ರಣಕ್ಕೆ ತಮ್ಮ ಒಪ್ಪಿಗೆ ನೀಡಿ ಮಾತೋಶ್ರೀ ಅವರು ಮಾತನಾಡಿ ಫೆಬ್ರವರಿ 5ರಂದು ನಡೆಯಲಿರುವ ಮಾತೃ ಮಡಿಲು ಈ ವಿಶೇಷ ಕಾರ್ಯಕ್ರಮದಲ್ಲಿ ಸುಮಾರು 3000 ಮುತ್ತೈದೆಯರಿಗೆ ಉಡಿ ತುಂಬಲಾಗುತ್ತಿರುವುದು ಸಂತೋಷದ ವಿಷಯ ಇಂಥಹ ಪುಣ್ಯದ ಕಾರ್ಯಕ್ರಮದಲ್ಲಿ ಭಾಗವಹಿಸುವ ಸೌಭಾಗ್ಯ ನೀವು ನನಗೆ ನೀಡುತ್ತಿದ್ದೀರಿ ನಾನು ಖಂಡಿತವಾಗಿಯೂ ಈ ಪುಣ್ಯದ ಕಾರ್ಯದಲ್ಲಿ ಭಾಗವಹಿಸುತ್ತೇನೆ ಎಂದು ತಿಳಿಸಿದ್ದಾರೆ.ಜ.28 ರಿಂದ ಚಬನೂರ ಗ್ರಾಮದಲ್ಲಿ ಆರಂಭವಾಗಲಿರುವ ಲೋಕಾರ್ಪಣೆಯ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಫೆಬ್ರವರಿ 7 ರವರೆಗೆ ನಡೆಯಲಿದ್ದು ಫೆ.8ಕ್ಕೆ ನೂತನ ಮಠ ಹಾಗೂ ಕಲ್ಯಾಣ ಮಂಟಪ ಲೋಕಾರ್ಪಣೆ ಗೊಳ್ಳಲಿದೆ. ಕೊಡೆಕಲ್ ಪರಮ ಪೂಜ್ಯ ಶ್ರೀ ಶಿವಕುಮಾರ ಮಹಾಸ್ವಾಮಿಗಳ ಈ ನಿಯೋಗದಲ್ಲಿ ನಾವದಗಿ ಬ್ರಹನ್ಮಠದ ಷಟಸ್ಥಳ ಬ್ರಹ್ಮ ಶ್ರೀ ರಾಜ ಗುರು ರಾಜೇಂದ್ರ ಒಡೆಯರ್ ಶಿವಾಚಾರ್ಯರು, ಕಲ್ಕೇರಿಯ ಸಿದ್ದರಾಮ ಶಿವಾಚಾರ್ಯರು, ಜ್ಯೋತಿಷ್ಯ ರತ್ನ ರಾಮಲಿಂಗಯ್ಯ ಮಹಾಸ್ವಾಮಿಗಳು, ಕೋಲಾರದ ಪ್ರಭು ಕುಮಾರ ಮಹಾಸ್ವಾಮಿಗಳು, ದೇವರ ಹಿಪ್ಪರಗಿ ಪರದೇಶಿ ಮಠದ ಶಿವಯೋಗಿ ಮಹಾಸ್ವಾಮಿಗಳು, ಕೊಡೆಕಲ್ಲ ಪ್ರಥಮ ದರ್ಜೆ ಗುತ್ತಿಗೆದಾರರಾದ ದಾವಲಸಾಬ ಕಮತಗಿ ಮತ್ತಿತರರು ಇದ್ದರು.

# ಅಂಬಾಮಠ ವಾರ್ಷಿಕ ಜಾತ್ರಾ ಮಹೋತ್ಸವದ ಸಿದ್ಧತೆಗಳ ಕುರಿತು ರಾಯಚೂರು ಜಿಲ್ಲಾಧಿಕಾರಿ ಸಭೆ ಯಶಸ್ವಿ



❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ರಾಯಚೂರು ಜಿಲ್ಲಾಧಿಕಾರಿಗಳು ಇಂದು ಸಿಂಧನೂರು ತಾಲ್ಲೂಕು ಮಟ್ಟದ ಎಲ್ಲಾ ಅಧಿಕಾರಿಗಳ ಸಭೆಯನ್ನು ನಡೆಸಿ, ದಿನಾಂಕ 03 ಜನವರಿ 2026 ರಂದು ಅಂಬಾಮಠಕ್ಕೆ ಮಾನ್ಯ ಮುಖ್ಯಮಂತ್ರಿಗಳ ಭೇಟಿ ಹಾಗೂ ಅಂಬಾಮಠ ವಾರ್ಷಿಕ ಜಾತ್ರಾ ಮಹೋತ್ಸವದ ಸಿದ್ಧತೆಗಳ ಕುರಿತು ಸಮಗ್ರವಾಗಿ ಚರ್ಚಿಸಿದರು.**

ಅಂಬಾಮಠ ವಾರ್ಷಿಕ ಜಾತ್ರಾ ಮಹೋತ್ಸವಕ್ಕೆ ರಾಜ್ಯದ ವಿವಿಧ ಭಾಗಗಳಿಂದ 4 ಲಕ್ಷಕ್ಕೂ ಹೆಚ್ಚು ಭಕ್ತರು ಆಗಮಿಸುವ ನಿರೀಕ್ಷೆ ಇರುವುದರಿಂದ, ಯಾವುದೇ ಅಡಚಣೆಗಳು ಉಂಟಾಗದಂತೆ ಎಲ್ಲಾ ಇಲಾಖೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕೆಂದು ಜಿಲ್ಲಾಧಿಕಾರಿಗಳು ಅಧಿಕಾರಿಗಳಿಗೆ ಕಟ್ಟುನಿಟ್ಟಾಗಿ ಸೂಚನೆ ನೀಡಿದರು. ಜಾತ್ರಾ ಸ್ಥಳ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ಸ್ವಚ್ಛತೆ ಮತ್ತು ನೈರ್ಮಲ್ಯ, ಸಮರ್ಪಕ ಕುಡಿಯುವ ನೀರಿನ ವ್ಯವಸ್ಥೆ, ಅಗತ್ಯವಿರುವ ಕಡೆಗಳಲ್ಲಿ ಆರೋಗ್ಯ ಶಿಬಿರಗಳು ಮತ್ತು ಪ್ರಾಥಮಿಕ ಚಿಕಿತ್ಸೆ ಕೇಂದ್ರಗಳ (Health Kiosk) ಸ್ಥಾಪನೆ ಮಾಡುವಂತೆ ತಿಳಿಸಿದರು. ಭಕ್ತರಿಗೆ ಯಾವುದೇ ಆರೋಗ್ಯ ಸಮಸ್ಯೆಗಳು ಎದುರಾಗದಂತೆ ಆರೋಗ್ಯ ಇಲಾಖೆ ಎಚ್ಚರಿಕೆಯಿಂದ ಕಾರ್ಯನಿರ್ವಹಿಸಬೇಕು ಎಂದು ಸೂಚಿಸಿದರು.

ಇದಲ್ಲದೆ, ಜಾತ್ರಾ ಮಹೋತ್ಸವದ ಸಮಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವಲ್ಲಿ ಪೊಲೀಸ್ ಇಲಾಖೆ ಪ್ರಮುಖ ಪಾತ್ರ ವಹಿಸಬೇಕು. ಜನಸಂದಣಿ ನಿಯಂತ್ರಣ, ವಾಹನ ಸಂಚಾರ ವ್ಯವಸ್ಥೆ, ತುರ್ತು ಪರಿಸ್ಥಿತಿಗಳಿಗೆ ತಕ್ಷಣ ಸ್ಪಂದಿಸುವ ವ್ಯವಸ್ಥೆಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರಬೇಕೆಂದು ಜಿಲ್ಲಾಧಿಕಾರಿಗಳು ಸೂಚಿಸಿದರು. ಮಾನ್ಯ ಮುಖ್ಯಮಂತ್ರಿಗಳ ಭೇಟಿ ಹಿನ್ನೆಲೆಯಲ್ಲಿ ಭದ್ರತಾ ವ್ಯವಸ್ಥೆಗಳನ್ನು ಇನ್ನಷ್ಟು ಬಲಪಡಿಸಿ, ಎಲ್ಲಾ ಇಲಾಖೆಗಳು ತಮ್ಮ ಜವಾಬ್ದಾರಿಗಳನ್ನು ಸಮಯಕ್ಕೆ ಸರಿಯಾಗಿ ನಿರ್ವಹಿಸಬೇಕೆಂದು ಸಭೆಯಲ್ಲಿ ಸೂಚನೆ ನೀಡಲಾಯಿತು. ಸಭೆಯಲ್ಲಿ ತಹಶೀಲ್ದಾರ ಅರುಣ ದೇಸಾಯಿ, ಅಧ್ಯಕ್ಷ ರಂಗನಗೌಡ, ಇಔ ಚಂದ್ರಶೇಖರ,ಪೌರಾಯುಕ್ತ ಪಾಂಡುರಂಗ ಹಾಗೂ ಎಲ್ಲಾ ತಾಲ್ಲೂಕು ಮಟ್ಟದ ಅಧಿಕಾ–ರಿಗಳು ಹಾಜರಿದ್ದು, ಜಾತ್ರಾ ಮಹೋತ್ಸವ ಹಾಗೂ ಮುಖ್ಯಮಂತ್ರಿಗಳ ಭೇಟಿ ಯಶಸ್ವಿಯಾಗಿ ನಡೆಸುವ ನಿಟ್ಟಿನಲ್ಲಿ ತಮ್ಮ ಸಹಕಾರವನ್ನು ನೀಡುವುದಾಗಿ ಭರವಸೆ ನೀಡಿದರು.

# ರಾಯಚೂರು ಜಿಲ್ಲೆಯ ಏಳು ಸಾಧಕರು ವೀರ ಕನ್ನಡಿಗ ಪ್ರಶಸ್ತಿಗೆ ಆಯ್ಕೆ ಡಿ 29 ರಂದು ಯಾದಗಿರಿಯಲ್ಲಿ ಪ್ರಶಸ್ತಿ ಪ್ರಧಾನ

❑ ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ಡಿ 27: ರಾಯಚೂರು ಜಿಲ್ಲೆಯ ಏಳು ಜನರು ವೀರ ಕನ್ನಡಿಗ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ ವಿಶ್ವಮಾನವ ರಾಷ್ಟ್ರಕವಿ ಕುವೆಂಪು ವೇದಿಕೆ ಕಸ್ತೂರಿ ಕರ್ನಾಟಕ ಜನಪರ ವೇದಿಕೆ (ರಿ)ಬೆಂಗಳೂರು ಹಾಗೂ ನಮ್ಮೂರ ಶಾಸಕರು ರಾಷ್ಟ್ರೀಯ ಕನ್ನಡ ಪತ್ರಿಕೆ ಆಶ್ರಯದಲ್ಲಿ ಮೂಕನಾಯಕಕಿರು ಚಲನಚಿತ್ರಪೋಸ್ಟ್‌ಬಿಡುಗಡೆ.**

ಹಾಗೂ ವೀರ ಕನ್ನಡಿಗ ರಾಜ್ಯೋತ್ಸವ ಪ್ರಶಸ್ತಿ ಪ್ರಧಾನ ಸಮಾರಂಭ ಇದೇ ಡಿಸೆಂಬರ್ 29 ಸೋಮವಾರ ಬೆಳಗ್ಗೆ 10:45ಕ್ಕೆ ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾ ಸಭಾಂಗಣ ಯಾದಗಿರಿ ನಗರದಲ್ಲಿ ಡಾ. ಜಲಾಲುದ್ದೀನ್ ಅಕ್ಬರ್ ಲಿಂಗಸುಗೂರು ನೇತೃತ್ವದಲ್ಲಿ ಹಾಗೂ ಶ್ರೀ ಸಿದ್ದಪ್ಪ ಹೂಟ್ಟಿ ಯಾದಗಿರಿ ಜಿಲ್ಲಾಧ್ಯಕ್ಷರು ಕನ್ನಡ ಸಾಹಿತ್ಯ ಪರಿಷತ್ ರವರ ಅಧ್ಯಕ್ಷತೆಯಲ್ಲಿ



ಕ್ಷೇತ್ರದ ಜನಪ್ರಿಯ ಶಾಸಕರಾದ ಚನ್ನರೆಡ್ಡಿ ಪಾಟೀಲ್ ತನ್ನೂರು ಇವರು ಕಾರ್ಯಕ್ರಮ ಉದ್ಘಾಟನೆ ಮಾಡಲಿದ್ದು. ಮಾಣಿಕ್ಯ ರೆಡ್ಡಿ ಗೌಡ ದರ್ಶನಾಪೂರ ಕಾಂಗ್ರೆಸ್ ಧುರೀಣ–ರು ಈ ಪ್ರಶಸ್ತಿ ಪ್ರಧಾನ ಮಾಡುತ್ತಿದ್ದಾರೆ ಈ ಪ್ರಶಸ್ತಿಗೆ ಭಾಜನರಾದ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಸಾಧಕರಾದ ಶಂಕರ್ ದೇವರು ಹಿರೇಮಠ್ ಸಾಹಿತಿಗಳು ಸಿಂಧನೂರು, ನಜೀರ್ ಅಹ್ಮದ್ ಅಧ್ಯಕ್ಷರು ಬ್ಲೂ ಬರ್ಡ್ ಚಾರಿಟೇಬಲ್ ಟ್ರಸ್ಟ್ ಲಿಂಗಸುಗೂರು.

ದೇವಪ್ಪ ಮಸ್ಕಿ ಸಮಾಜ ಸೇವಕರು ಹಟ್ಟಿ ಚಿನ್ನದ ಗಣಿ, ಅಬ್ದುಲ್ ರಶೀದ್ ತಾಲೂಕ ಅಧ್ಯಕ್ಷರು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಧ್ವನಿ ಲಿಂಗಸುಗೂರು. ವಿಜಯ ಪೋಳ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕರ್ನಾಟಕ ರಾಷ್ಟ್ರೀಯ ಸಮಿತಿ ಕೆ ಆರ್ ಎಸ್ ಪಕ್ಷ ರಾಯಚೂರ್ ಹಾಗೂ ಎಸ್ ನಜೀರ್ ಮಸ್ಕಿ ಪತ್ರಕರ್ತರು ರಾಯಚೂರು, ಮಾರುತಿ ಗೋಸ್ಲೆ ಜೀಮ್ ಮಾಸ್ಟರ್ ಕರಡಕಲ್ ಇವರು 2025ನೇ ಸಾಲಿನ "ವೀರ ಕನ್ನಡಿಗ" ರಾಜ್ಯ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಇವರನ್ನು ಜನಸಮ್ಮುಖತೆಯಲ್ಲಿ ಗೌರವ ಪೂರಕವಾಗಿ ಪ್ರಶಸ್ತಿ ನೀಡಿ ಸನ್ಮಾನಿಸಲಾಗುವುದು ಎಂದು ಸಾಹಿತ್ಯ ಹಾಗೂ ಪತ್ರಕರ್ತರಾದ ಡಾ. ಜಲಾಲುದ್ದೀನ್ ಅಕ್ಬರ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರಾಷ್ಟ್ರೀಯ ಮತದಾರ ದಿನಾಚರಣೆ ರಾಯಚೂರಲ್ಲಿ ಪ್ರಬಂಧ ಸ್ಪರ್ಧೆ ನಡೆಸಿ ವಿದ್ಯಾರ್ಥಿಗಳಿಗೆ ಜಾಗೃತಿ

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು: ಡಿಸೆಂಬರ್ 26 (ಕರ್ನಾಟಕ ವಾರ್ತೆ): ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಸ್ವೀಪ್ ಸಮಿತಿ ಇವರ ಸಂಯುಕ್ತಾಶ್ರಯದಲ್ಲಿ ರಾಷ್ಟ್ರೀಯ ಮತದಾರ ದಿನಾಚರಣೆಯ ಪ್ರಯುಕ್ತ ಜಿಲ್ಲಾಮಟ್ಟದ ಪ್ರಬಂಧ ಸ್ಪರ್ಧೆಯು ಇತ್ತೀಚೆಗೆ ನಗರದ ಜಲ ನಿರ್ಮಲ ಸಭಾಂಗಣದಲ್ಲಿ ನಡೆಯಿತು. ಶಾಲಾ ಮಟ್ಟದಲ್ಲಿ ಹಾಗೂ ತಾಲೂಕು ಮಟ್ಟದಲ್ಲಿ ಈ ಹಿಂದೆ ನಡೆದ ಪ್ರಬಂಧ ಸ್ಪರ್ಧೆಯಲ್ಲಿ ಭಾಗಿಯಾದ ಪ್ರಬಂಧ ವಿಜೇತರು ಜಿಲ್ಲಾಮಟ್ಟದ ಸ್ಪರ್ಧೆಗಾಗಿ ಜಲನಿರ್ಮಲ ಸಭಾಂಗಣದಲ್ಲಿ ಸೇರಿದ್ದರು.**

ಪ್ರಜಾಪ್ರಭುತ್ವದಲಿ ಮತದಾನ ಮತ್ತು ಚುನಾವಣೆ ವಿಷಯಗಳ ಬಗ್ಗೆ ವಿದ್ಯಾರ್ಥಿಗಳಿಗೆ ಪ್ರಬಂಧದ ವಿಷಯ ನೀಡಲಾಯಿತು. ಪ್ರೌಢಶಾಲೆ ವಿಭಾಗ, ಪದವಿ ಪೂರ್ವ ಕಾಲೇಜು ವಿಭಾಗ ಮತ್ತು ಪದವಿ ಮತ್ತು ವಿಶ್ವವಿದ್ಯಾಲಯಗಳ ವಿಭಾಗವಾರು ಪ್ರತ್ಯೇಕ ವಿಷಯಗಳ ಮೇಲೆ ವಿದ್ಯಾರ್ಥಿಗಳು ಪ್ರಬಂಧ ಬರೆದರು. ಸಸಿಗೆ ನೀರು ಹಾಕಿ ಸ್ಪರ್ಧೆ ಉದ್ಘಾಟಿಸಿದ ಜಿಲ್ಲಾ



ಪಂಚಾಯತ್ ಉಪ ಕಾರ್ಯದರ್ಶಿ ಹಾಲಸಿದ್ದಪ್ಪ ಪೂಜೇರಿ ಮಾತನಾಡಿ, ನಮ್ಮದು ಪ್ರಜಾಪ್ರಭುತ್ವ ರಾಷ್ಟ್ರವಾಗಿದೆ. ವಿಶ್ವದಲ್ಲಿಯೇ ಭಾರತದ ಸಂವಿಧಾನವು ಲಿಖಿತ ಸಂವಿಧಾನವಾಗಿದೆ. ಬೇರೆ ದೇಶಗಳಿಗೆ ಹೋಲಿಸಿದರೆ, ನಮಗೆ ಬೇಕಾಗಿರುವಂತ ಜನನಾಯಕನನ್ನು ಆಯ್ಕೆ ಮಾಡುವಂತಹ ಅಧಿಕಾರವು ಮತದಾರ–ರಿಗೆ ಸಂವಿಧಾನಬದ್ಧವಾಗಿ ಬಂದಿದೆ. ಮಹತ್ವದ ಮತದಾನದ ಅವಕಾಶವು 18 ವರ್ಷ ಮೇಲ್ಪಟ್ಟ ಎಲ್ಲರಿಗೂ ಸಮಾನವಾಗಿ ಸಿಕ್ಕಿರುವುದು ಒಂದು ಸುವರ್ಣ ಅವಕಾಶ. ರಾಷ್ಟ್ರ ಮತ್ತು ರಾಜ್ಯ ಚುನಾವಣಾ ಆಯೋಗವು ಇಂತಹ ಪ್ರಬಂಧ ಸ್ಪರ್ಧೆಯನ್ನು ಆಯೋಜನೆ ಮಾಡುವುದರ ಮೂಲಕ ವಿದ್ಯಾರ್ಥಿಗಳಿಗೆ ಚುನಾವಣೆ ಮತ್ತು ಮತದಾನದ ಅರಿವು ಮೂಡಿಸುವಂತಹ ಕೆಲಸವನ್ನು ಮಾಡುತ್ತಿದೆ.



ಚುನಾವಣೆ ಮತ್ತು ಮತದಾನ ಸಂದರ್ಭದಲ್ಲಿ ಹಲವಾರು ರೀತಿಯ ಕಾರ್ಯ ಚಟುವಟಿಕೆಗಳು ನಡೆಯುತ್ತಿದ್ದು ಅವುಗಳ ಕುರಿತು ಅರಿವನ್ನು ಮೂಡಿಸುವಂತಹ ಹಿನ್ನೆಲೆಯಲ್ಲಿ ಜಿಲ್ಲಾ ಮಟ್ಟದ ಪ್ರಬಂಧ ಸ್ಪರ್ಧೆಯನ್ನು ಆಯೋಜನೆ ಮಾಡಲಾಗಿದೆ. ಇಂಥ ಸ್ಪರ್ಧೆಗಳು ವಿದ್ಯಾರ್ಥಿಗಳ ಚುನಾವಣೆ ಮತ್ತು ಮತದಾನದ ಬಗ್ಗೆ ತಿಳಿದುಕೊಳ್ಳಲು ಅವಶ್ಯಕವಾಗಿವೆ ಎಂದು ತಿಳಿಸಿದರು.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪನಿರ್ದೇಶಕರಾದ ಕೆ.ಡಿ. ಬಡಿಗೇರ ಅವರು ಮಾತನಾಡಿ, ನಮ್ಮ ಮತದಾನ ವ್ಯವಸ್ಥೆಯು ಪ್ರಜಾಪ್ರಭುತ್ವದ ತಳಹದಿಯಾಗಿದೆ ಎಂದರು. ಈ ಪ್ರಬಂಧ ಸ್ಪರ್ಧೆಯನ್ನು ರಾಯಚೂರ ಜಿಲ್ಲೆಯಲ್ಲಿ ಅಚ್ಚುಕಟ್ಟಾಗಿ ನಡೆಸಿ ರಾಷ್ಟ್ರೀಯ ಮತದಾರ ದಿನಾಚರಣೆಯನ್ನು ಯಶಗೊಳಿಸಲು ಶ್ರಮಿಸಿರುವುದು ಅಭಿನಂದನಾರ್ಹ ಸಂಗತಿ ಎಂದರು. ರಾಷ್ಟ್ರೀಯ ಮತದಾರ ದಿನಾಚರಣೆ ಕಾರ್ಯಕ್ರಮದ ಶಾಲಾ ಶಿಕ್ಷಣ ವಿಭಾಗದ ನೋಡಲ್ ಅಧಿಕಾರಿ ಡಾ. ದಂಡಪ್ಪ ಬಿರಾದಾರ ಮಾತನಾಡಿ, ನಮ್ಮ ದೇಶದಲ್ಲಿ ಚುನಾವಣೆಗಳು ಮತ್ತು ಮತದಾನ ಪ್ರಕ್ರಿಯೆಗಳು ನಿರಂತರವಾಗಿ ನಡೆಯುತ್ತವೆ.

ಒಂದು ಮತ ದೇಶಕೆ ಹಿತ. ನನ್ನ ಮತ ನನ್ನ ಧ್ವನಿ. ಮತದಾನಕ್ಕೆ ಮಹತ್ವ ಶಕ್ತಿ ಇದೆ ಎಂಬುದನ್ನು ಎಲ್ಲರೂ ಅರಿಯಬೇಕು ಎಂದು ತಿಳಿಸಿದರು. ಸಮಾರಂಭದಲ್ಲಿ ಪದವಿ ಪೂರ್ವ ಶಿಕ್ಷಣ ವಿಭಾಗದ ಮಂಜುನಾಥ್, ಆದಿಕವಿ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಡಾ. ಚನ್ನಬಸವ, ಡಾ.ಶಂಕರನಂದಾ ಜಿ. ಉಪಸಿತರಿದ್ದರು. ರಾಯಚೂರು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯದ ಶಿಕ್ಷಣ ಸಂಯೋಜಕರಾದ ಸಿ ಪಿ ಓದಿಸೊವಮಠ ಸ್ವಾಗತಿಸಿದರು. ವಂದಿಸಿದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### MD Organon of Medicine and Homeopathic Philosophy.

ಆರ್ಗನಾನ್ ಆಫ್ ಮೆಡಿಸಿನ್ & ಹೋಮಿಯೋಪತಿ ಫಿಲಾಸಫಿಯಲ್ಲಿ ಎಂಡಿ ಮೂರು ವರ್ಷಗಳ ಸ್ನಾತಕೋತ್ತರ ಪದವಿ ಕಾರ್ಯಕ್ರಮವಾಗಿದ್ದು, ಇದು ಹೋಮಿಯೋಪತಿಯ ಮೂಲ ತತ್ವಗಳು, ಕಾನೂನುಗಳು ಮತ್ತು ತತ್ವಶಾಸ್ತ್ರಗಳ ಆಳವಾದ ಜ್ಞಾನವನ್ನು ಒದಗಿಸುತ್ತದೆ. ಸಂಸ್ಥಾಪಕ ಡಾ. ಸ್ಯಾಮ್ಯುಯೆಲ್ ಹ್ಯಾನೆಮನ್ ಅವರ ಬೋಧನೆಗಳು ಮತ್ತು ಅವುಗಳ ಆಧುನಿಕ ಅನ್ವಯಿಕೆಗಳ ಆಧಾರದ ಮೇಲೆ ಮುಂದುವರಿದ ಕ್ಲಿನಿಕಲ್, ಸೈದ್ಧಾಂತಿಕ ಮತ್ತು ಸಂಶೋಧನಾ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು ಈ ಕೋರ್ಸ್ ಅನ್ನು ವಿನ್ಯಾಸಗೊಳಿಸಲಾಗಿದೆ. ಕೋರ್ಸ್ ವಿವರಗಳು ಅವಧಿ: ಈ ಕಾರ್ಯಕ್ರಮವು ಸಾಮಾನ್ಯವಾಗಿ ಪೂರ್ಣ ಸಮಯದ ಆಧಾರದ ಮೇಲೆ ಮೂರು ವರ್ಷಗಳ ಕಾಲ ಇರುತ್ತದೆ, ಇದರಲ್ಲಿ ಪ್ರಾಯೋಗಿಕ ತರಬೇತಿ ಮತ್ತು ಇಂಟರ್ನ್‌ಶಿಪ್ ಅಥವಾ ಮನೆ ಕೆಲಸ ಸೇರಿವೆ.ಅರ್ಹತೆ:ಅಭ್ಯರ್ಥಿಗಳು ಹೋಮಿಯೋಪತಿ ಮೆಡಿಸಿನ್ ಮತ್ತು ಸರ್ಜರಿಯಲ್ಲಿ ಬ್ಯಾಚುಲರ್ (BHMS) ಪದವಿ ಅಥವಾ ರಾಷ್ಟ್ರೀಯ ಹೋಮಿಯೋಪತಿ ಆಯೋಗ (NCH) ಗುರುತಿಸಿದ ಸಮಾನ ಅರ್ಹತೆಯನ್ನು ಹೊಂದಿರಬೇಕು.ಒಂದು ವರ್ಷದ ಕಡ್ಡಾಯ ಇಂಟ-ರ್ನ್‌ಶಿಪ್ ಅಗತ್ಯವಿದೆ.ಈ ಕೋರ್ಸ್ ಆರ್ಗನಾನ್ ಆಫ್ ಮೆಡಿಸಿನ್‌ನಲ್ಲಿ ವಿವರಿಸಿದಂತೆ ಹೋಮಿಯೋಪತಿಯ ಮೂಲಭೂತ ತತ್ವಗಳ ಅಧ್ಯಯನ ಮತ್ತು ಪ್ರಾಯೋಗಿಕ ಅನ್ವಯದ ಸುತ್ತ ಸುತ್ತುತ್ತದೆ.ಮೂಲ ಪರಿಕಲ್ಪನೆಗಳು: ಅಧ್ಯಯನದ ಪ್ರಮುಖ ಕ್ಷೇತ್ರಗಳಲ್ಲಿ ಹೋಲಿಕೆಗಳ ನಿಯಮ, ಪ್ರಮುಖ ಬಲ, ಮಿಯಾಸಮ್‌ಗಳು (ದೀರ್ಘಕಾಲದ ಕಾಯಿಲೆಗಳ ಸಿದ್ಧಾಂತ), ಕೇಸ್-ಟೇಕಿಂಗ್ ವಿಧಾನಗಳು, ಡೋಸೇಜ್ (ಸಾಮರ್ಥ್ಯ ಮತ್ತು ಡೋಸೇಜ್ ಆಯ್ಕೆ), ಮತ್ತು ವಿವಿಧ ತೀವ್ರ ಮತ್ತು ದೀರ್ಘಕಾಲದ ಕಾಯಿಲೆಗಳನ್ನು ನಿರ್ವಹಿಸುವಲ್ಲಿ ಈ ತತ್ವಗಳ ಅನ್ವಯ ಸೇರಿವೆ.ಕ್ಲಿನಿಕಲ್ ಏಕೀಕರಣ: ಸೆಮಿನಾರ್‌ಗಳು, ಗುಂಪು ಚರ್ಚೆಗಳು, ಜರ್ನಲ್ ಕ್ಲಬ್‌ಗಳು ಮತ್ತು ಹೊರರೋಗಿ (OPD) ಮತ್ತು ಒಳರೋಗಿ ವಿಭಾಗಗಳು (IPD) ಎರಡರಲ್ಲೂ ವ್ಯಾಪಕವಾದ ಕೇಸ್ ಸ್ಟಡೀಸ್ ಮೂಲಕ ಕ್ಲಿನಿಕಲ್ ಅಭ್ಯಾಸದೊಂದಿಗೆ ತಾತ್ವಿಕ ತತ್ವಗಳನ್ನು ಸಂಂ-ಯೋಜಿಸುವುದನ್ನು ಈ ಕಾರ್ಯಕ್ರಮವು ಒತ್ತಿಹೇಳುತ್ತದೆ.ಸಂಶೋಧನೆ: ವಿದ್ಯಾರ್ಥಿಗಳು ವೈಜ್ಞಾನಿಕ ವಿಚಾರಣೆ ಮತ್ತು ಸಂಶೋಧನಾ ವಿಧಾನದಲ್ಲಿ ತೊಡಗಿಸಿಕೊಳ್ಳುವ ನಿರೀಕ್ಷೆಯಿದೆ, ಇದಕ್ಕೆ ಹೆಚ್ಚಾಗಿ ಸಂಶೋಧನಾ ಪ್ರಬಂಧದ ಪ್ರಕಟಣೆ ಮತ್ತು ಪ್ರಬಂಧದ ಸಲ್ಲಿಕೆ ಅಗತ್ಯವಿರುತ್ತದೆ. ಎಂಡಿ ಪೂರ್ಣಗೊಳಿಸಿದ ನಂತರ, ಪದವೀಧರರು ಸಮರ್ಥ ತಜ್ಞರು ಅಥವಾ ವೈದ್ಯಕೀಯ ಶಿಕ್ಷಕರಾಗಿ ಕೆಲಸ ಮಾಡಬಹುದು. ವೃತ್ತಿ ಮಾರ್ಗಗಳಲ್ಲಿ ಖಾಸಗಿ ಕ್ಲಿನಿಕಲ್ ಪ್ರಾಕ್ಟೀಸ್, ಸರ್ಕಾರಿ ಅಥವಾ ಖಾಸಗಿ ಆಸ್ಪತ್ರೆಗಳಲ್ಲಿ ಕೆಲಸ, ಸಾರ್ವಜನಿಕ ಆರೋಗ್ಯ ಉಪಕ್ರಮಗಳು ಮತ್ತು ಹೋಮಿಯೋಪತಿ ಕಾಲೇಜುಗಳು ಮತ್ತು ಸಂಸ್ಥೆಗಳಲ್ಲಿ ಸಂಶೋಧನೆ ಮತ್ತು ಶೈಕ್ಷಣಿಕ ಹುದ್ದೆಗಳು ಸೇರಿವೆ.

## ಪಿ.ಯು. ಹಂತದಲ್ಲೇ ಸ್ಪರ್ಧಾತ್ಮಕ ಪರೀಕ್ಷೆಗೆ ಉಚಿತ ಮಾರ್ಗದರ್ಶನ ನೇತಾಜಿ ಕೆರಿಯರ್ ಅಕ್ಯಾಡೆಮಿ ಉದ್ಘಾಟನೆ

❑ ನೈಜ್ಯ ದೆಸೆ ನ್ಯೂಸ್


**ಮಾನ್ವಿ: ಪಿ.ಯು. ಹಂತದಲ್ಲೇ ಕಲಿಕೆಯ ಜೊತೆಗೆ ವಿದ್ಯಾರ್ಥಿಗಳ ಭವಿಷ್ಯಕ್ಕೆ ಭದ್ರ ಬುನಾದಿ ಹಾಕುವ ಉದ್ದೇಶದಿಂದ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಮರ್ಪಕ ಮಾರ್ಗದರ್ಶನ ನೀಡುವ ನಿಟ್ಟಿನಲ್ಲಿ ನೇತಾಜಿ ಕೆರಿಯರ್ ಅಕ್ಯಾಡೆಮಿಯನ್ನು ಆರಂಭಿಸಲಾಗಿದೆ ಎಂದು ನೇತಾಜಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಕೆ.ಈ. ನರಸಿಂಹ ಅವರು ಹೇಳಿದರು.**



ಅವರು ಇಂದು ಪಟ್ಟಣದ ನೇತಾಜಿ ಶಿಕ್ಷಣ ಸಂಸ್ಥೆಯಲ್ಲಿ ನೂತನವಾಗಿ ಆರಂಭಿಸಲಾದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರವನ್ನು ಉದ್ಘಾಟಿಸಿ ಮಾತನಾಡಿದರು. ಇದು ಸಂಸ್ಥೆಯ ಬಹುದಿನಗಳ ಕನಸಾಗಿದ್ದು, ವಿಶೇಷವಾಗಿ ಗ್ರಾಮೀಣ ಭಾಗದ ರೈತ ಕುಟುಂಬದ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ಈ ಅಕ್ಯಾಡೆಮಿಯನ್ನು ಪ್ರಾರಂಭಿಸಲಾಗಿದೆ ಎಂದು ತಿಳಿಸಿದರು. ಅನುಭವಿ ಸಂಪನ್ಮೂಲ ವ್ಯಕ್ತಿಗಳು ಹಾಗೂ ಈಗಾಗಲೇ ವಿವಿಧ ಇಲಾಖೆಗಳಲ್ಲಿಉದ್ಯೋಗ ಪಡೆದ ಅಧಿಕಾರಿಗಳಿಂದ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಲಾಗುತ್ತದೆ. ಪ್ರತಿ ಶುಕ್ರವಾರ ಮತ್ತು ಶನಿವಾರ ಮಧ್ಯಾಹ್ನ 2 ಗಂಟೆಯಿಂದ ಸಂಜೆ 4 ಗಂಟೆವರೆಗೆ ತರಗತಿಗಳು ನಡೆಯಲಿದ್ದು, ಈ ತರಬೇತಿ ಸಂಪೂರ್ಣ ಉಚಿತವಾಗಿದೆ.

ಮಾನ್ವಿ ಪಟ್ಟಣ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಪಿ.ಯು. ಮತ್ತು ಡಿಗ್ರಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಈ ಸೌಲಭ್ಯವನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ಅವರು ಮನವಿ ಮಾಡಿದರು. ಎಸ್.ಡಿ.ಎ., ಎಫ್.ಡಿ.ಎ., ಶಿಕ್ಷಕ, ಉಪನ್ಯಾಸಕ, ಬ್ಯಾಂಕಿಂಗ್, ಪೊಲೀಸ್ ಇಲಾಖೆ, ಕಂದಾಯ ಇಲಾಖೆ, ಆಡಳಿತಾತ್ಮಕ ಇಲಾಖೆಗಳ ಕ್ಲಾಸ್-ಒನ್ ಹಾಗೂ ಕ್ಲಾಸ್-ಟು ಸೇರಿ ಎಲ್ಲಾ ಪ್ರಮುಖ ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿಗಾಗಿ ಸಮಗ್ರ ತರಬೇತಿ ನೀಡಲಾಗುತ್ತದೆ ಎಂದು ಅವರು ಹೇಳಿದರು. ಈ ಸಂದರ್ಭದಲ್ಲಿ ಸಂಸ್ಥೆಯ ಕಾರ್ಯದರ್ಶಿ ಕೆ. ವಿಜಯಲಕ್ಷ್ಮಿ, ಸಹ ಕಾರ್ಯದರ್ಶಿ ಕೆ. ರವಿವರ್ಮ, ತರಬೇತಿದಾರರಾದ ಹೆಚ್.ಟಿ. ನಾಯಕ, ಹುಸೇನ್ ಭಾಷಾ, ಆಂಜನೆಯ್ಯ ಹಾಗೂ ಉಪನ್ಯಾಸಕರಾದ ಆರೀಫ್, ಚಂದ್ರು ಜಾದವ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ಸಂಚಾರಿ ನಿಯಮ ಪಾಲಿಸಿ, ಸೈಬರ್ ವಂಚನೆಗೆ ಒಳಗಾಗದಿರಿ: ಎಸ್.ಪಿ.ಎಂ.ಪುಟ್ಟಮಾದಯ್ಯ




❑ ನೈಜ್ಯ ದೆಸೆ ನ್ಯೂಸ್

**ಸಂಚಾರಿ ನಿಯಮಗಳನ್ನು ಕಡ್ಡಾಯವಾಗಿ ಪ್ರತಿಯೊಬ್ಬರೂ ಪಾಲನೆ ಮಾಡಬೇಕು ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಬರುವ ಲಿಂಕ್ ಗಳಿಗೆ ಸ್ಪಂದಿಸಬೇಡಿ ಕಾನೂನು ಪಾಲನೆಗೆ ಸಾರ್ವಜನಿಕರ ಸಹಕಾರವು ಅಗತ್ಯವಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಪುಟ್ಟಮಾದಯ್ಯ ತಿಳಿಸಿದರು.**

ಶುಕ್ರವಾರ ನಗರದ ಸಂಚಾರಿ ಪೊಲೀಸ್ ಠಾಣೆಯಲ್ಲಿ ನಡೆದ ಅಪರಾಧ ತಡೆ ಮಾಸಾಚರಣೆ ಕುರಿತು ಕರಪತ್ರ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಕಳೆದ ಎರಡು ದಿನಗಳಲ್ಲಿ ಸಂಚಾರಿ ನಿಯಮಗಳನ್ನು ಪಾಲನೆ ಮಾಡದ ಹಾಗೂ ಲೈಸೆನ್ಸ್ ಇಲ್ಲದ ಮೂವರು ಕುಳಿತು ಬೈಕ್ ಚಲಾಯಿಸುವುದು, ಹಾಗೂ ವಿಮೆ ನವೀಕರಣ ಆಗದಿರುವುದು, ಮದ್ಯಪಾನ ಸೇವಿಸಿ ಬೈಕ್ ಚಾಲನೆ ಸೇ-ರಿದಂತೆ 150ಕ್ಕೂ ಅಧಿಕ ಬೈಕ್ ಗಳನ್ನು ಪೊಲೀಸರು ಈಗಾಗಲೇ ವಶಕ್ಕೆ ಪಡೆದಿದ್ದಾರೆ.

ಪ್ರತಿಯೊಬ್ಬರೂ ಕೂಡ ಕಡ್ಡಾಯವಾಗಿ ಹೆಲ್ಮೆಟ್ ಹಾಕಿಕೊಳ್ಳಬೇಕು ಒಂದು ಬಾರಿ ಹೋದ ಜೀವ ಮರಳಿ ಬಾರದು ಮತ್ತು ಸೈಬರ್ ವಂಚನೆಗೆ ಒಳಗಾಗದಿರಿ, ನಿಮಗೆ ಎಲ್ಲಿಯಾದರೂ ಅನುಮಾನಸ್ಪದ ಕಂಡು ಬಂದಲ್ಲಿ ಪೊಲೀಸರ ಗಮನಕ್ಕೆ ತರಬೇಕು. 80 ಕಿ.ಮೀ. ವೇಗದಲ್ಲಿ ಓಡಿಸಬೇಡಿ ಮತ್ತು ಪಾಲಕರು 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ವಾಹನ ಚಲಾಯಿಸುವುದಕ್ಕೆ ಬಿಡಬೇಡಿ ಇದು ಅಪರಾಧ ಈ ಬಾರಿ ಕೇವಲ ದಂಡ ಹಾಕಿ ಎಚ್ಚರಿಕೆ ಕೊಡುತ್ತಿದ್ದೇವೆ, ಮುಂದಿನ ದಿನಗಳಲ್ಲಿ ತಿದ್ದಿಕೊಳ್ಳದಿದ್ದಲ್ಲಿ ಕಡ್ಡಾಯವಾಗಿ ಪ್ರಕರಣ ದಾಖಲಿಸುತ್ತೆವೆ ಎಂದು ಎಚ್ಚರಿಕೆ ನೀಡಿದರು. ಈ ವೇಳೆ: ಡಿವೈಎಸ್ಪಿ ಚಂದ್ರಶೇಖರ್ ಜಿ, ಪಿಐ ವೀರಾರೆಡ್ಡಿ, ಸಂಚಾರಿ ಪಿಎಸ್ಐ ಚಂದ್ರಶೇಖರ್ ಹಿರೇಮಠ ಇದ್ದರು. ಜಾಗೃತಿ ಮೂಡಿಸುವ ಕರ ಪತ್ರವನ್ನು ಪೊಲೀಸರೊಂದಿಗೆ ಸಮಾಜದ ಮುಖಂಡರು, ಪತ್ರಕರ್ತರು, ಭಾಗವಹಿಸಿ ಬಿಡುಗಡೆಗೊಳಿಸಿದರು.

## ಕಾರುಣ್ಯ ಆಶ್ರಮದಲ್ಲಿ ಕರುಣಾಮೂರ್ತಿ ಕ್ರಿಸ್ತ ಯೇಸುವಿನ ಜಯಂತಿ ಆಚರಣೆ

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಡಿ 26 ನಗರದ ಕಾರುಣ್ಯ ಪುಣ್ಯಾಶ್ರಮದಲ್ಲಿ ಕರುಣಾಮೂರ್ತಿ ಕ್ರಿಸ್ತ ಯೇಸುವಿನ ಜಯಂತಿಯನ್ನು ಭಕ್ತಿಭಾವ ಹಾಗೂ ಸೇವಾಭಾವದಿಂದ ಆಚರಿಸಲಾಯಿತು. ಈ ಸಂದರ್ಭದಲ್ಲಿ ಆರ್.ಎಚ್. ನಂಬರ್ ವನ್, ಬರ್ಮಾ ಕ್ಯಾಂಪ್ ನಿವಾಸಿಗಳಾದ ದೀಪಕ್ ನಿನಸಿಯವರ ಕುಟುಂಬ ಹಾಗೂ ಸಿರಿಲ್?ನಿರ್ಮಲಾ ಲಾಜರ್ ಕುಟುಂಬದವರು ಕಾರುಣ್ಯ ಆಶ್ರಮಕ್ಕೆ ಭೇಟಿ ನೀಡಿ ಕ್ರಿಸ್ತ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಿದರು.**



ಕ್ರಿಸ್ತ ಜಯಂತಿಯ ಅಂಗವಾಗಿ ಆಶ್ರಮದಲ್ಲಿ ನೆಲೆಸಿರುವ ಹಿರಿಯ ಜೀವಿಗಳೊಂದಿಗೆ ಕೇಕ್ ಕತ್ತರಿಸಿ ಹಂಚುವ ಮೂಲಕ ಸಂಭ್ರಮಿಸಲಾಯಿತು. ಜೊತೆಗೆ ಎಲ್ಲರಿಗೂ ಕೇಕ್, ಬಾಳೆಹಣ್ಣು, ಸಣ್ಣಪುಟ್ಟ ಪ್ರಥಮ ಚಿಕಿತ್ಸೆಗೆ ಅಗತ್ಯವಿರುವ ಔಷಧಿಗಳು ಹಾಗೂ ಅಕ್ಕಿಯನ್ನು ವಿತರಿಸುವ ಮೂಲಕ ಮಾನವೀಯ ಸೇವೆ ಸಲ್ಲಿಸಲಾಯಿತು. ಹಿರಿಯ ನಾಗರಿಕರೊಂದಿಗೆ ಹಬ್ಬವನ್ನು ಆಚರಿಸುವ ಮೂಲಕ ಕ್ರಿಸ್ತ ಯೇಸುವಿನ ಪ್ರೀತಿ, ದಯೆ ಮತ್ತು ಕರುಣೆಯ ಸಂದೇಶವನ್ನು ಕಾರ್ಯರೂಪದಲ್ಲಿ ತೋರಿಸಲಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ಚನ್ನಬಸಯ್ಯ ಸ್ವಾಮೀ-ಜಿಯವರು, ಕಾರುಣ್ಯ ಆಶ್ರಮದಂತಹ ಪವಿತ್ರ ಸೇವಾ ಕೇಂದ್ರದಲ್ಲಿ ಕ್ರಿಸ್ತ ಜಯಂತಿಯನ್ನು ಆಚರಿಸುವುದು ಅತ್ಯಂತ ಅರ್ಥಗರ್ಭಿತ ಹಾಗೂ ಸಂತೋಷದಾಯಕವಾಗಿದೆ ಎಂದು ತಿಳಿಸಿದರು. ಕರುಣಾಮೂರ್ತಿ ಯೇಸು ಕ್ರಿಸ್ತನ ಸಂದೇಶವು ಸೇವೆ ಮತ್ತು ಸಹಾನುಭೂತಿಯಲ್ಲಿ ಅಡಗಿದ್ದು, ಅದನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ಅವರು ಕರೆ ನೀಡಿದರು. ಕಾರ್ಯಕ್ರಮದಲ್ಲಿ ಮಾತನಾಡಿದ ಸನ್ ರೈಸ್ ಸ್ಕೂಲ್ ಆಫ್ ನರ್ಸಿಂಗ್ ಪ್ರಾಚಾರ್ಯರಾದ ಸಿರಿಲ್, ಕರುಣಾಮೂರ್ತಿ ಯೇಸು ಕ್ರಿಸ್ತನ ದಯೆ ಮತ್ತು ಕರುಣೆಯನ್ನು ಜೀವನದಲ್ಲಿ ಅಳವಡಿಸಿಕೊಂಡು, ಆಶ್ರಮದಲ್ಲಿರುವ ಹಿರಿಯ ಜೀವಿಗಳನ್ನು ಪ್ರೀತಿಯಿಂದ ಆರೈಕೆ ಮಾಡುತ್ತಿರುವ ಚನ್ನಬಸಯ್ಯ ಜಂಗಮ ದಂಪತಿಗಳ ಸೇವೆಯಲ್ಲಿ ಕ್ರಿಸ್ತ ಯೇಸುವಿನ ಪ್ರತಿರೂಪ ಸ್ಪಷ್ಟವಾಗಿ ಕಾಣುತ್ತದೆ ಎಂದು ಅಭಿಪ್ರಾಯಪಟ್ಟರು. ಇದೇ ಸಂದರ್ಭದಲ್ಲಿ ನಿರ್ಮಲಾ?ಲಾಜರ್ ಮತ್ತು ಸಿರಿಲ್ ದಂಪತಿಗಳು ದೀಪಕ್ ನಿನಸಿಯ ದಂಪತಿಗಳನ್ನು ಗೌರವಪೂರ್ವಕವಾಗಿ ಸನ್ಮಾನಿಸಿದರು. ಎರಡೂ ಕುಟುಂಬಗಳ ಪುಟಾಣಿ ಮಕ್ಕಳು ಆಶ್ರಮದಲ್ಲಿ ಕೇಕ್ ಕತ್ತರಿಸಿ ಹಿರಿಯ ಜೀವಿಗಳಿಗೆ ಹಂಚಿ ಸಂತೋಷ ವ್ಯಕ್ತಪಡಿಸಿದರು. ಈ ಕಾರ್ಯಕ್ರಮವು ಕ್ರಿಸ್ತ ಜಯಂತಿಯನ್ನು ಕೇವಲ ಹಬ್ಬದ ಆಚರಣೆಯಾಗಿ ಮಾತ್ರವಲ್ಲದೆ, ಸೇವೆ, ಮಾನವೀಯತೆ ಮತ್ತು ಸಹಬಾಳ್ವೆಯ ಸಂದೇಶವನ್ನು ಸಾರುವ ಅರ್ಥಪೂರ್ಣ ಕಾರ್ಯಕ್ರಮವಾಗಿ ರೂಪುಗೊಂಡಿತು.

## ಪ್ರತಿಯೊಬ್ಬರು ಕ್ರಿಸ್ತನ ಶಾಂತಿ ಮತ್ತು ಸಹನೆ ಅಳವಡಿಸಿಕೊಳ್ಳಿ :ಫಾ॥ ಮಾರ್ಕೇಶ್

❑ ನೈಜ್ಯ ದೆಸೆ ನ್ಯೂಸ್

**ದೇವದುರ್ಗ: ಪ್ರತಿಯೊಬ್ಬರು ಯೇಸುಕ್ರಿಸ್ತನ ಜೀವನ ಸಂದೇಶಗಳೊಂದಿಗೆ ಕರುಣೆ, ಶಾಂತಿ ಮತ್ತು ಸಹನೆಯನ್ನು ಅಳವಡಿಸಿಕೊಳ್ಳಬೇಕು. ಜೊತೆಗೆ ಆತನ ವಾಕ್ಯಗಳನ್ನು ಸಂದೇಶಗಳನ್ನು ಪಾಲಿಸಬೇಕೆಂದು ಮೆಥೋಡಿಸ್ಟ್ ಚರ್ಚಿನ ಫಾದರ್ ಮಾರ್ಕೇಶ್ ತಿಳಿಸಿದರು. ತಾಲೂಕಿನ ಹೊನ್ನಟಗಿ ಮೆಥೋಡಿಸ್ಟ್ ಚರ್ಚ್ ಆವರಣದಲ್ಲಿ ಗುರುವಾರ ಕ್ರಿಸ್ತ ಜಯಂತಿಯಂಗವಾಗಿ ಆಯೋಜಿಸಲಾದ ಕಾರ್ಯಕ್ರಮದಲ್ಲಿ ಸಂದೇಶ ಸಾರಿದರು.**



ಯೇಸುಕ್ರಿಸ್ತನು ಈ ಲೋಕದ ಒಳಿತಿಗಾಗಿ ಶಿಲುಬೆಯ ಮೇಲೆ ಪ್ರಾಣವನ್ನು ಅರ್ಪಿಸಿದನು. ಮತ್ತೆ ಮೂರು ದಿನದಲ್ಲಿ ಪುನರ್‌ಜನ್ಮ ತಾಳಿದನು. ಮಿತ್ಯ ಮಾರ್ಗ ಬಿಟ್ಟು ಸತ್ಯ ಮಾರ್ಗದಲ್ಲಿ ನಡಿಯಬೇಕೆಂದರು. ಯುವಕರು ದುಶ್ಚಟದಿಂದ ದೂರ ಇರಬೇಕು. ಮದ್ಯ ವ್ಯಸನಿಯಾಗಬಾರದು. ಸನ್ಮಾರ್ಗದಲ್ಲಿ ನಡೆದು ಒಳ್ಳೆಯ ಜೀವನ ನಡೆಅಬೇಕೆಂದು ಫಾದರ್ ಮಾರ್ಕೇಶ್ ತಿಳಿಸಿದರು.

ಈ ಸಂದರ್ಭದಲ್ಲಿ ಸರಕಾರಿ ಪ್ರಾಥ-'ಮಿಕ ಶಾಲಾ ಶಿಕ್ಷಕರ ಸಂಘದ ನಿರ್ದೇಶಕ ಪ್ರಕಾಶ ಹೊನ್ನಟಗಿ, ವಿಶ್ವಾಸಿಗಳಾದ ಯಲ್ಲಪ್ಪ, ಹನುಮಂತರಾಯ, ದೊಡ್ಡ ಅಬ್ರಾಮಪ್ಪ, ಅಬ್ರಾಮಪ್ಪ, ಬೂದೆಪ್ಪ, ಬಾಬು, ಭೀಮಣ್ಣ ಹದ್ದಿನಾಳ, ಪ್ರಜ್ವಲ್, ಮಹೇಶ್, ಅನಿಲ ಕುಮಾರ್, ವಿರೇಶ್, ಬಾಬು ಕರಡಿ, ಗಂಗಪ್ಪ, ಹನುಮಂತ ಕರಡಿ, ಖಾನ್ ಸಾಬ್, ಮ-ರಿಯಾಳಮ್ಮ, ಗುರುದೇವಮ್ಮ, ಅನುರಾದಮ್ಮ, ಲಲಿತಮ್ಮ, ಲಕ್ಷ್ಮೀ, ಬೂದೆಮ್ಮ ಗೀತಮ್ಮ, ಗಂಗಮ್ಮ, ನರಸಮ್ಮ ಯಲ್ಲಮ್ಮ, ಬಾಬಾಮ್ಮ ಮತ್ತು ಸಭೆಯ ಉಗ್ರಾಣಿಕರು ಸೇರಿದಂತೆ ಸಭೆಯ ವಿಶ್ವಾಸಿಗರು ಪಾಲ್ಗೊಂಡಿದ್ದರು.

## ಚಾಗಭಾವಿ ವಿಶ್ವ ವಿಕಲಚೇತನರ ದಿನಾಚರಣೆ ಹಾಗೂ ವಿಕಲಚೇತನರ ಸಮನ್ವಯ ಸಭೆ ಯಶಸ್ವಿ



❑ ನೈಜ್ಯ ದೆಸೆ ನ್ಯೂಸ್

**ಸಿರವಾರ: ತಾಲೂಕಿನ ಚಾಗಭಾವಿ ಗ್ರಾಮ ಪಂಚಾಯಿತಿ ಕಾರ್ಯಾಲಯದಲ್ಲಿ ಜಿಲ್ಲಾಧಿಕಾ-ರಿಗಳ ಕಾರ್ಯಾಲಯ ನಗರಾಭಿವೃದ್ಧಿ ಕೋಶ, ರಾಯಚೂರು, ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ, ರಾಯಚೂರು ಹಾಗೂ ಗ್ರಾಮ ಪಂಚಾಯತ್ ಕಾರ್ಯಾಲಯ, ಚಾಗಭಾವಿ ಇವರ ಸಂಯುಕ್ತಾಶ್ರಯದಲ್ಲಿ ವಿಶ್ವ ವಿಕಲಚೇತನರ ದಿನಾಚರಣೆ ಹಾಗೂ ವಿಕಲಚೇತನರ ಸಮನ್ವಯ ಸಭೆ ಅತ್ಯಂತ ಯಶಸ್ವಿಯಾಗಿ ನಡೆಯಿತು.**

ಕಾರ್ಯಕ್ರಮದಲ್ಲಿ ಮಾತನಾಡಿದ ಸಂಕಲ್ಪ ವಿಕಲಚೇತನರ ಒಕ್ಕೂಟದ ಗೌರವಾಧ್ಯಕ್ಷರಾದ ದೇಸಾಯಿ ದೊತರಬಂಡಿ ಅವರು, ವಿಶ್ವ ವಿಕಲಚೇತನರ ದಿನಾಚರಣೆಯ ಮಹತ್ವವನ್ನು ವಿವರಿಸಿದರು. ವಿಕಲಚೇತನರ ಬಗ್ಗೆ ಸಮಾಜದಲ್ಲಿ ಬಳಸಲಾಗುವ ಅವಮಾನಕಾರಿ ಹಾಗೂ ನೋವುಂಟುಮಾಡುವ ಪದಗಳನ್ನು ಸಂಪೂರ್ಣವಾಗಿ ತ್ಯಜಿಸಬೇಕೆಂದು ಅವರು ಮನವಿ ಮಾಡಿದರು. ವಿಕಲಚೇತನರು ಸಹ ಸಮಾನ ಗೌರವ, ಹಕ್ಕು ಹಾಗೂ ಅವಕಾಶಗಳಿಗೆ ಅರ್ಹರಾಗಿದ್ದು, ಗೌರವಪೂರ್ಣ ಭಾಷೆ ಮತ್ತು ಮಾನವೀಯ ವರ್ತನೆಯೇ ನಿಜವಾದ ಸಬಲೀಕರಣಕ್ಕೆ ದಾರಿ ಎಂದು ತಿಳಿಸಿದರು.

ಸಮನ್ವಯ ಸಭೆಯಲ್ಲಿ ವಿಕಲಚೇತನರ ಹಕ್ಕುಗಳು, ಸರ್ಕಾರದಿಂದ ದೊರೆಯುವ ಸೌಲಭ್ಯಗಳು, ಪುನರ್ವಸತಿ ಕ್ರಮಗಳು, ಸಾಮಾಜಿಕ ಒಗ್ಗಟ್ಟು ಹಾಗೂ ಜಾಗೃತಿ ಕುರಿತು ಸವಿಸ್ತಾರ ಚರ್ಚೆ ನಡೆಯಿತು. ವಿಕಲಚೇತನರನ್ನು ಕೇವಲ ಸಹಾನುಭೂತಿಯಿಂದ ಅಲ್ಲ, ಗೌರವ ಮತ್ತು ಸಮಾನತೆಯ ದೃಷ್ಟಿಯಿಂದ ನೋಡುವ ಮನೋಭಾವ ಸಮಾಜದಲ್ಲಿ ಬೆಳೆಸಬೇಕೆಂಬ ಸಂದೇಶವನ್ನು ಕಾರ್ಯಕ್ರಮ ನೀಡಿತು.

ಈ ಸಂದರ್ಭದಲ್ಲಿ ಪಂಚಾಯತಿ ಕರ ವಸಲಿಗಾರರಾದ ಮಲ್ಲಯ್ಯ, ಸಂಕಲ್ಪ ವಿಕಲಚೇತನರ ಒಕ್ಕೂಟದ ಜಿಲ್ಲಾಧ್ಯಕ್ಷರಾದ ಶಿವಕುಮಾರ್ ಚಲ್ಮಲ್, ಹೊಸಬೆಳಕು ಸಂಜೀವಿನಿ ಒಕ್ಕೂಟದ ಮುಖ್ಯ ಪುಸ್ತಕ ಬರಹಗಾರರಾದ ಗಾಯತ್ರಿ, ಗ್ರಾಮೀಣ ಪುನರ್ವಸತಿ ಕಾರ್ಯಕರ್ತರಾದ ಮಲ್ಲಿಕಾರ್ಜುನ, ಸಿರವಾರ ಪಟ್ಟಣ ಪಂಚಾಯಿತಿ ನಗರ ಪುನರ್ವಸತಿ ಕಾರ್ಯಕರ್ತರು ಸೇ-ರಿದಂತೆ ಅನೇಕ ವಿಕಲಚೇತನ ಬಂಧುಗಳು ಉಪಸ್ಥಿತರಿದ್ದು ಕಾರ್ಯಕ್ರಮಕ್ಕೆ ಶೋಭೆ ತಂದರು.

## ಮರ್ಯಾದಗೇಡು ಹತ್ಯೆ ಖಂಡಿಸಿ ದಲಿತ ಪ್ರಗತಿಪರ ಸಂಘಟನೆಗಳು ಮೌನ ಪ್ರತಿಭಟನೆ: ಆರೋಪಿಗಳಿಗೆ ಕಠಿಣ ಶಿಕ್ಷೆ ವಿಧಿಸಬೇಕು: ವಿಶ್ವನಾಥ ಬಲ್ಲಿದವ್

❑ ನೈಜ್ಯ ದೆಸೆ ನ್ಯೂಸ್

**ದೇವದುರ್ಗ: ಹುಬ್ಬಳಿಯ ಇನಾಂ ಮೀರಾಪುರ ಗ್ರಾಮದಲ್ಲಿ ನಡೆದ ಮರ್ಯಾದಗೇಡು ಹತ್ಯೆ ಖಂಡಿಸಿ ದಲಿತ ಪ್ರಗತಿಪರ ಸಂಘಟನೆಗಳ ಒಕ್ಕೂಟ ಸಮಿತಿ ಪದಾಧಿಕಾರಿಗಳು ಸಾರ್ವಜನಿಕ ಕ್ಲಬ್ ಆವರಣದಿಂದ ಮೌನ ಪ್ರತಿಭಟನೆ ತಹಶೀಲ್ ಕಚೇರಿಗೆ ಆಗಮಿಸಿ ಸಿಎಂಗೆ ಬರೆದ ಮನವಿ ತಹಶೀಲ್ದಾರಗೆ ಸಲ್ಲಿಸಿದರು. ಭೀಮ ಆರ್ಮಿ ಸಂಘಟನೆ ತಾಲೂಕಾಧ್ಯಕ್ಷ ವಿಶ್ವನಾಥ ಬಲ್ಲಿದವ್ ಮಾತನಾಡಿ, ರಾಜ್ಯದಲ್ಲಿ ದಿನೇ-ದಿನೇ ಜಾತಿ ವೈಷಮ್ಯ ಹೆಚ್ಚಾಗಿ ಆತಂಕಾರಿ ಬೆಳವಣಿಗೆಗಳು ಸಂಭವಿಸುತ್ತಿವೆ.**



ಇಂತಹ ಘಟನೆಗಳು ನಡೆಯುತ್ತಿರುವ ಹಿನ್ನಲೆ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ದಹಗೆಟ್ಟಿದ್ದು, ದಲಿತರು ಪ್ರೀತಿಸಿ ಮದುವೆ ಆಗಬಾರದೆಂಬ ವಾತಾವರಣ ನಿರ್ಮಾಣವಾಗಿದೆ ಎಂದು ದೂ-ರಿದರು. ಇನಾಂ ಮೀರಾಪುರ ಗ್ರಾಮದಲ್ಲಿ ನಡೆದಿರುವ ಘಟನೆ ರಾಜ್ಯವೇ ತಲೆತೆಗ್ಗಿಸುವಂತಾಗಿದೆ. ರಾಜ್ಯ ಸರಕಾರ ಇಂತಹ ಘೋರ ಅಪರಾಧಗಳನ್ನು ನಿಗ್ರಹಿಸಲು ಉಗ್ರ ಕಾನೂನನ್ನು ರೂಪಿಸಿ ಜಾರಿಗೆ ತರಬೇಕಾಗಿದೆ. ಅಂತರ್ ಜಾತಿ ವಿವಾಹಗಳಾದ ಮಕ್ಕಳನ್ನು ಪೋಷಕರೇ ಕಾನೂನಿನ ಭಯವಿಲ್ಲದೇ ಮರ್ಯಾದೆಯ ಹೆಸರಲ್ಲಿ ನಿರ್ದಯವಾಗಿ ಹತ್ಯೆ ಮಾಡುತ್ತಿರುವ ಘಟನೆಗಳು ಇತ್ತೀಚೆಗೆ ರಾಜ್ಯದಲ್ಲಿ ನಡೆಯುತ್ತಿವೆ ಎಂದು ಕಳವಳ ವ್ಯಕ್ತಪಡಿಸಿದರು. ರೈತರು ಬೆಳೆಯುವ ಅನ್ನ, ಆರೋಗ್ಯ ಸಮಸ್ಯೆ ಇದ್ದಾಗ ನೀಡುವ ರಕ್ತ ಇವುಗಳಿಗೆ ಯಾವುದೇ ಜಾತಿ ಅಡ್ಡ ಬರುವುದಿಲ್ಲ. ಪ್ರೀತಿಸಿ ಮದುವೆಗಳು ಆದಾಗ ಅಲ್ಲಿ ಜಾತಿ ಬರುತ್ತಿದೆ ಎಂದು ದೂರಿದರು.

ಪ್ರೀತಿಸಿ ಮದುವೆಯಾದ ಮಗಳನ್ನೇ ಒಬ್ಬ ತಂದಿ ಕೊಲೆ ಮಾಡಿರುವುದು ನಿಜಕ್ಕೂ ದುರಂತ. ಎಂಆರ್‌ಎಚ್‌ಎಸ್ ಸಂಘಟನೆ ಜಿಲ್ಲಾಧ್ಯಕ್ಷ ಹನುಮಂತಪ್ಪ ಮನ್ನಾಪೂರಿ ಮಾತನಾಡಿ, ಮೀರಾಪುರ ಗ್ರಾಮದಲ್ಲಿ ನಡೆದಿರುವ ಘಟನೆ ಈರಾಜ್ಯದಲ್ಲಿ ದಲಿತ ಯುವಕರು ಪ್ರೀತಿ ಮಾಡಬಾರದೆಂಬತಾಗಿದೆ. ಇಂತಹ ಘಟನೆಗಳು ಮರಕಳಸದಂತೆ ರಾಜ್ಯ ಸರಕಾರ ಗಂಭೀರವಾಗಿ ಪರಿಗಣಿಸಬೇಕು ಎಂದು ಹೇಳಿದರು. ನೊಂದ ಕುಟುಂಬಕ್ಕೆ ಸರಕಾರಿ ಸೂಕ್ತ ಪರಿಹಾರ ನೀಡುವ ಜೊತೆಗೆ ಭದ್ರತೆ ಒದಗಿಸಬೇಕು. ಬಂಧಿಸಿರುವ ಆರೋಪಿಗಳಿಗೆ ಕಠಿಣ ಶಿಕ್ಷೆ ವಿಧಿಸಬೇಕು.

ರಾಜ್ಯದಲ್ಲಿರುವ ದಲಿತರಿಗೆ ಸೂಕ್ತ ರಕ್ಷಣೆ ನೀಡಬೇಕು ಎಂದು ಹೇಳಿದರು. ಇದೇ ಸಂದರ್ಭದಲ್ಲಿ ಹನುಮಂತ್ರಾಯ ದೊರೆ, ಮೋಹನ್ ಬಲ್ಲಿದವ್, ಕ್ರಾಂತಿಕುಮಾರ ರಾಯಚೂರಕರ್, ಮಹಾಂತೇಶ ಭವಾನಿ, ರಂಗನಾಥ ಕೊಂಭೀನ್, ರಮೇಶ ನಾಯಕ, ಚಂದ್ರ ನಾಯಕ, ನಾಗರಾಜ, ಬಸವರಾಜ ಜಗ್ಲಿ, ಬಸವರಾಜ, ವಲೀ ಖರೇಶಿ, ಮೌನೇಶ, ಚಾಂದಪಾಷ್ ಬಡಿಗೇರಾ, ಮಲ್ಲಿಕಾರ್ಜನ್ ಸಂಗ್ರಿ ಸೇರಿದಂತೆ ಇತರರು ಇದ್ದರು. ದೇವದುರ್ಗ: ಹುಬ್ಬಳಿಯ ಇನಾಂ ಮೀರಾಪುರ ಗ್ರಾಮದಲ್ಲಿ ನಡೆದ ಮರ್ಯಾದಗೇಡು ಹತ್ಯೆ ಖಂಡಿಸಿ ದಲಿತ ಪ್ರಗತಿಪರ ಸಂಘಟನೆಗಳ ಒಕ್ಕೂಟ ಸಮಿತಿ ಶುಕ್ರವಾರ ಮೌನ ಪ್ರತಿಭಟನೆ ಮೂಲಕ ಸಿಎಂಗೆ ಬರೆದ ಮನವಿ ಉಪ ತಹಶೀಲ್ದಾರಿಗೆ ಸಲ್ಲಿಸಿದರು. ಹಲವು ಮುಖಂಡರು ಪಾಲ್ಗೊಂಡಿದರು.